motion. I have got a number of things to say. Any time may be fixed, say for two hours so that we can discuss and we will go to the regular business.

ಶ್ರೀ ಎಂ. ವೀರಪ್ಪ ಮೊಯಿಲಿ .— ರೂಲ್ ೫೮ರಲ್ಲಿ ಮಾತನಾಡಲಿಕ್ಕೆ ಬರುವುದಿಲ್ಲ. ೧೪೬ರಲ್ಲಿ ಡಿಸ್‌ಕಸ್ ಮಾಡಲಿಕ್ಕೆ ತರಬಹುದು. ಮಧ್ಯಾಹ್ನ ಮೂರುವರೆ ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರುತ್ತದೆ ಆಗ ಡಿಸ್‌ಕಸ್ ಮಾಡೋಣ. ಇಲ್ಲಿಗೆ ಈ ವಿಚಾರ ಬಿಡುವುದು ಒಳ್ಳೆಯದು.

SRI DEVARAJ URS .— I think that is the suggestion made by the Hon. Minister for Finance, if the Treasury Benches are going by that suggestion, we have no o jection. I am sending a resolution under Rule 146. Time, day and other things can be discussed and some allotment of time be made when the Business Advisory Committee meets.

SRI R. GUNDU RAO .— I have no objection. The matter can be discussed in the Business Advisory Committee. But still I say why there should be unnecessary discussion here because it is not the business of our State : it is not the business of this House. Why should we unnecessarily talk ? It is out of the purview of the State Legislature. Anyway we will discuss the matter in the Business Advisory Committee.

MR. SPEAKER .— We will go to the next subject.

Matters under Rule 312

re :— *Scarcity of essential Commodities and rise in Prices.*

ಶ್ರೀ ಎಸ್. ಎಸ್. ಅರಕೇರಿ(ಬಳ್ಳೊಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ನಾನು ರೂಲ್ ೩೧೨ರ ಪ್ರಕಾರ ಈ ವಿಚಾರವನ್ನು ರಾಜ್ಯದ ಮುಖ್ಯಮಂತ್ರಿಗಳವರ ಗಮನಕ್ಕೆ ತಮ್ಮ ಮುಖೇನ ತರುತ್ತಿದ್ದೇನೆ. ಇವೊತ್ತು ರಾಜ್ಯದಲ್ಲಿ ಜನರ ನಿತ್ಯಬಳಕೆಯ ವಸ್ತುಗಳಾದಂಥ ಸೀಮೆಎಣ್ಣೆ, ಸಕ್ಕರೆ, ಸಿಮೆಂಟ್ ಇಲ್ಲದೆ ರೈತರ ಸಲುವಾಗಿ ಬೇಕಾದಂಥ ಡೀಸಲ್ ಬೆಲೆಗಳು, ಜೀವನಾವಶ್ಯಕ ವಸ್ತುಗಳ ಬೆಲೆ ದಿನೇ ದಿನೇ ಏರುತ್ತಿವೆ. ಕಳೆದ ಐದಾರು ತಿಂಗಳುಗಳಿಂದಲೂ ಬೆಲೆಗಳ ಏರುಮುಖ ಚಾಸ್ತಿಯಾಗುತ್ತಿದೆ. ಮುಖ್ಯವಾಗಿ ಹೇಳುವುದಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಕೆ. ಜಿ. ಸಕ್ಕರೆಯನ್ನು ಏಳು ಎಂಟು ರೂಪಾಯಿ ಕೊಟ್ಟು ಬ್ಲಾಕ್‌ನಲ್ಲಿ ತರಬೇಕಾಗಿದೆ. ಗ್ರಾಮಾಂತರ ಪ್ರದೇಶಗಳ ಸೊಸೈಟಿಗೆ ಕೂಡ ತಕ್ಕಂತಹ ಸಕ್ಕರೆ ಸೊಸೈಟಿಗೆ ಹೋದ ಕೂಡಲೇ ಮಾಯವಾಗುತ್ತದೆ. ಸೀಮೆಎಣ್ಣೆ ಹಳ್ಳಿಗಳ ಕಡೆಗಳಲ್ಲಿ ಅಡುಗೆ ಬಳಕೆಗೆ ಸಿಕ್ಕದಿದ್ದರೂ ಅವರು ರಾತ್ರಿ ವೇಳೆ ದೀಪಕ್ಕೆ ಉಪಯೋಗಿಸಲಿಕ್ಕೆ ಬೇಕಾಗುತ್ತದೆ. ಈಗ ಸೀಮೆಎಣ್ಣೆ ಅಭಾವ ಅಂಥ ಬಾಯಲ್ಲಿ ಹೇಳುತ್ತಿರುತ್ತಾರೆ. ಆದರೆ ಒಂದು ಲೀಟರ್ ಎಣ್ಣೆಗೆ ನಾಲ್ಕೈದು ರೂಪಾಯಿ ಕೊಟ್ಟರೆ ಸಿಕ್ಕುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸೀಮೆಎಣ್ಣೆ, ಸಕ್ಕರೆ ಇವುಗಳ ಬಗ್ಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಇದರಿಂದ ಜನತೆಯಲ್ಲಿ ಹಾಹಾಕಾರ ನಿರ್ಮಾಣವಾಗಿದೆ. ರೈತರ ಗೋಳು ಹೇಳಲಿಕ್ಕೆ ಆಗುವುದಿಲ್ಲ. ಡೀಸಲ್ ಸಿಕ್ಕದೆ ಪಂಪ್‌ಸೆಟ್ಟುಗಳನ್ನು ಹಾಗೆ ನಿಲ್ಲಿಸಿರುವುದರಿಂದ ಬೆಳೆಗಳ ಅಭಿವೃದ್ಧಿಗೆ ತೊಂದರೆಯಾಗಿದೆ ಇದರ ಬಗ್ಗೆ ಜಿಲ್ಲಾಧಿಕಾರಿಗಳವರ ಕಡೆ ಹೋದರೆ ಸರಿಯಾಗಿ ಲೈಸೆನ್ಸ್ ಕೊಡುವುದಿಲ್ಲ. ಡೀಸಲ್ ಸಪ್ಲೈ ಇಲ್ಲ ಅಂತ ಹೇಳುತ್ತಾರೆ.

ಇನ್ನು ಸಿಮೆಂಟ್ ಬಗ್ಗೆ ಹೇಳುವುದಾದರೆ, ಕಂಟ್ರೋಲ್ ರೇಟ್ ೨೫—೨೬ ರೂ. ಇದ್ದರೆ ಹೊರಗಡೆ ಅಂದರೆ ಬ್ಲಾಕ್‌ನಲ್ಲಿ ೬೦-೭೦ ರೂಪಾಯಿಗಳಿಗೆ ಮಾರಾಟಮಾಡುತ್ತಿದ್ದಾರೆ.

ಅಧ್ಯಕ್ಷರು .— ನಾನುತ್ತೇತಮಗೆ ಹೆಚ್ಚು ಹೊತ್ತು ಕಾಲಾವಕಾಶ ಕೊಡುವುದಕ್ಕೆ ಸಾಧ್ಯವಿಲ್ಲವಾದ್ದರಿಂದ ದಯವಿಟ್ಟು ಆದಷ್ಟು ಬೇಗ ತಮ್ಮ ಅಭಿಪ್ರಾಯ ಏನಿದೆ ಅದನ್ನು ಸಭೆಗೆ ತಿಳಿಸಬೇಕು.

ಶ್ರೀ ಮೈಕೆಲ್ ಫರ್ನಾಂಡಿಸ್ .— ಸ್ವಾಮಿ, ಚುನಾವಣೆ ಸಂದರ್ಭದಲ್ಲಿ ಮಾಡಿದ ಭಾಷಣವನ್ನೇ ಇಲ್ಲೂ, ಈಗಲೂ ಮಾಡುತ್ತಿದ್ದಾರೆ. ಈ ರೀತಿ ಭಾಷಣ ಮಾಡಿಕೊಂಡೇ ಓಟು ತೆಗೆದುಕೊಂಡು ಬಂದಿದ್ದಾರೆ. ಇನ್ನೂ ಏತಕ್ಕೆ ಅದನ್ನೆ ಹೇಳಬೇಕು ?

ಶ್ರೀ ಎಸ್. ಎಸ್. ಆರಕೇರಿ .— ಸ್ವಾಮಿ, ನಾನು ಹೆಚ್ಚು ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಇವತ್ತಿನದಿವಸ ಬೆಲೆಗಳು ಏನು ಏರುತ್ತಿವೆ ಆ ಬೆಲೆಯನ್ನು ಹತೋಟಿಯಲ್ಲಿ ತೆಗೆದುಕೊಂಡು ಜನತೆಗೆ ಸುಲಭವಾಗಿ ಆಹಾರ ಪದಾರ್ಥಗಳು ಸಿಕ್ಕುವಂತೆ ಮಾಡಿ ಸರ್ಕಾರದವರು ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

SRI B B. SAYANAK.— I would like to make a submission because this is a most important matter.

MR. SPEAKER .— I cannot understand why the hon. Member is conducting in this way.

SRI B. B. SAYANAK .— Why are you enraged ? Have I not the right to speak ?

MR. SPEAKER .—I will call your name after Sri A. Lakshmi Sagar Now, Sri A. Lakshmi Sagar will raise the matter under Rule 312 regarding scarcity of essential commodities and rise in prices of these commodities.

SRI A. LAKSHMI SAGAR .— I request the Hon. Speaker to be more indulgent in giving time to explain the position on a matter like this which affects every section of the society in the context of continuos rise in prices of all commodities of daily use. Therefore, let us not go by technicalities because this is not a matter about which we can deal according to rules. You can be little more flexible because of the importance of the matter. I want to make it clear that any Government must be in a position to provide things of every day use at reasonable prices and if I may give the figures at which commodities are being sold you will be able to understand the gravity of the situation. In the last three months prices of all commodities of daily use have been continuously rising. The groundnut oil has increased by Re. 1/- per litre.

ಶ್ರೀ ಹೆಚ್. ಡಿ. ದೇವೆಗೌಡ.—ಸ್ವಾಮಿ; ತಾವು ಕಳೆದ ೩ ತಿಂಗಳಲ್ಲಿ ದಿನಬಳಕೆ ವಸ್ತುಗಳ ಬೆಲೆ ಹಾಸ್ಯಾಯಾಗಿದೆ, ಎಂದು ತಾವು ಹೇಳುತ್ತಿದ್ದೀರಿ. ಆದರೆ ೩ ತಿಂಗಳ ಹಿಂದೆ ಬೇರೆ ಸರ್ಕಾರ ಇತ್ತು, ಇವತ್ತು ಆ ಸರ್ಕಾರ ಬಿದ್ದುಹೋಗಿದೆ. ಬೇರೆ ಸರ್ಕಾರ ಬಂದಿದೆ. ಈಗ ಒಂದು ತಿಂಗಳಿಂದ ಬೆಲೆಗಳು ಏನು ಏರುತ್ತಿವೆ ಅದಕ್ಕೆ ಈಗಿನ ಸರ್ಕಾರ ಜವಾಬ್ದಾರಿಯಾಗುತ್ತದೆ ಈಗ ಬೆಲೆಗಳನ್ನು ಇಳಿಸಿ ಎಂದು ತಾವು ಹೇಳಬೇಕೇ ಹೊರತು ಬೇರೆ ಇನ್ನೇನೂ ಬೇಳುವುದಕ್ಕೆ ಹೋಗಬಾರದು.

SRI A. LAKSHMI SAGAR.—But, more particularly from the last 45 days since the assumption of office by the recent Chief Minister and his colleagues, the prices have been continuously rising. The

prices of Chillies have increased by 50 paise to Rs. 2.50/- Soaps of all brands have increased by 30 paise. The price of pulses have increased by Rs. 20/- per bag.

ಅಧ್ಯಕ್ಷರು.—ತಾವು ಇಲ್ಲಿ ತಂದಿರುವುದು ನಿಯಮ ೩೧೨ರ ಕೆಳಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ. ಆದರೆ ತಾವು ಅದನ್ನು ಬಿಟ್ಟು ಒಂದು ದೊಡ್ಡ ಪಟ್ಟಿಯನ್ನೇ ಇಲ್ಲಿ ತೆಗೆದುಕೊಂಡು ಬಂದು ಓದುವುದಕ್ಕೆ ಹೊರಟಿದ್ದೀರಿ. ಇದು ಸರಿಯಲ್ಲ.

SRI A. LAKSHM SAGAR.—I under stand. Then, how am I to dr w the attention of the Hon. Minister and how ean I expect him to understand the position of the matter ? If I ask him simply why there has been a rise in prices of essential commodities, he will give a blanket answer. Therefore, I try to point out in a clear way, so that I may minimise the time.

The retail prices of coco-nut oil, fuel. coal, vegetables and fruits and the likewise commodities have also been on the increase. There has been no attempt to stop it. The price of jaggery 15 days ago was Rs. 2 to 2.20, but now it has increased to Rs 3.50 to 4.00. In the case of tamarind, it was Rs. 5 to 5.20, but now it is Rs. 6 to 6.20.

ಅಧ್ಯಕ್ಷರು.—ತಾವು ೪-೫ ಪೇಜುಗಳಷ್ಟು ಬರೆದುಕೊಂಡು ಬಂದು ಇಲ್ಲಿ ಓದುವುದಾದರೆ ನಾನು ಅದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಮುಖ್ಯವಾದ ವಿಷಯ ಏನಾದರೂ ಇದ್ದರೆ ಅದನ್ನು ಮಾತ್ರ ತಾವು ತಿಳಿಸಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ರೂಲ್ ಪ್ರಕಾರ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಮಾನ್ಯ ಸದಸ್ಯರು ನಿಂತಿದ್ದಾರೆ. ಇವತ್ತು ಜನತೆಗೆ ಏನು ತೊಂದರೆಯಾಗಿದೆ ಎಂಬುದನ್ನು ಉದಾಹರಣೆಗಳ ಮೂಲಕ ಇಲ್ಲಿ ಹೇಳುತ್ತಿದ್ದಾರೆ. ಅದನ್ನು ತಾವು ಕೇಳದೇ ನೀವು ಹೇಳುವುದನ್ನು ನಿಲ್ಲಿಸಿ, ನಿಲ್ಲಿಸಿ ಎಂದು ಹೇಳುವುದಾದರೆ, ಇದರ ಅರ್ಥವೇನು ? ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ಏನಿದೆ ಎಂಬುದನ್ನು ಸಭೆಗೆ ತಿಳಿಸಲು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ರೂಲ್ ಕೋಟ್ ಮಾಡಿ ಹೇಳಿದರೆ ಸಾಕು.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ನಮಗೆ ದಿನಬಳಕೆವಸ್ತುಗಳ ಬೆಲೆಯನ್ನು ಕಡಿಮೆ ಮಾಡಿ, ರೂಲ್ ಬೇಕಾದರೆ ತಾವೇ ಇಟ್ಟುಕೊಳ್ಳಿ.

ಅಧ್ಯಕ್ಷರು.—ತಾವು ಇದೇ ವಿಷಯವನ್ನೇ ಸಭೆಯಮುಂದೆ ಬೇರೆ ರೀತಿಯಿಂದ ತೆಗೆದುಕೊಂಡು ಬನ್ನಿ. ಏತಕ್ಕೆಂದರೆ ತಾವು ಈಗ ತಂದಿರುವ ರೂಲ್ ೩೧೨ರ ಪ್ರಕಾರ ಇದಕ್ಕೆ ಸ್ಕೋಪ್ ಇಲ್ಲ.

ಶ್ರೀ ಎ. ಲಕ್ಷ್ಮಿಸಾಗರ್.—ತಾವು ದಯವಿಟ್ಟು ನಾನು ಏನು ಹೇಳುತ್ತಿದ್ದೇನೆಂಬುದನ್ನು ಕೇಳಬೇಕು. ಇವತ್ತು ಕರ್ನಾಟಕದ ೩ ಕೋಟಿ ಜನತೆಗೆ ಇರತಕ್ಕ ತೊಂದರೆಗಳನ್ನು ತಮ್ಮ ಮುಂದೆ ನಾನು ಹೇಳುತ್ತಿದ್ದರೆ, ತಾವು ಅದಕ್ಕೆ ಅವಕಾಶ ಕೊಡದೆ ರೂಲ್ಸ್ ಪ್ರಕಾರ ಮಾತನಾಡಿ ಎಂದು ಹೇಳುತ್ತಿದ್ದೀರಿ. ಇದಕ್ಕೆ ನಾನು ಏನು ಹೇಳಬೇಕು ?

ಶ್ರೀ ಜೆ. ಎಚ್. ಪಟೇಲ್.—ಅಧ್ಯಕ್ಷರೇ ರೂಲ್ ನಂ. ೩೧೨ಗೆ ಕಾಲ ಎಷ್ಟು ಎಂಬುದು ನಿಗದಿಯಿಲ್ಲ. ಯಾವ ವಿಷಯಕ್ಕೆ ಎಷ್ಟು ಹೊತ್ತು ಮಾತನಾಡಬೇಕೆಂಬುದೂ ಕೂಡ ನಿಗದಿಯಿಲ್ಲ. ರೂಲ್ ನಂ ೩೧೨ರ ಬಗ್ಗೆ ಎಷ್ಟೋ ಸಂದರ್ಭಗಳಲ್ಲಿ ದಿವಸಗಟ್ಟಲೇ ಮಾತನಾಡಿದ್ದು ತಮಗೂ ಅನುಭವ ಇರುತ್ತದೆ. ದಯವಾಡಿ ಎಷ್ಟೋ ಸಂದರ್ಭಗಳಲ್ಲಿ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮ್ಮನ್ನು ಎಷ್ಟು ವರ್ಣಿಸಿದರೂ ಸಾಲದು. ಈವಾಗ ಮಾತನಾಡುತ್ತಿರುವ ವಿಷಯ ಹೊಟ್ಟೆಗೆ ಬಟ್ಟೆಗೆ ಸಂಬಂಧಪಟ್ಟ ವಿಷಯವಾಗಿರುತ್ತದೆ. ಬಡಜನರಿಗೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ಇದನ್ನು ತಮ್ಮ ಗಮನ

ನಕ್ಕೆ ತರಲು ಮಾನ್ಯ ಮಿತ್ರರು ಇರತಕ್ಕ ವಿಷಯವನ್ನು ಹೇಳುತ್ತಿರಬೇಕಾದರೆ ತಾವು ಕುಳಿತುಕೊಳ್ಳಿ. ಓದುವುದನ್ನು ನಿಲ್ಲಿಸಿ ಎದು ಹೇಳುವುದು ಸರಿಯಲ್ಲ. ಸಕ್ಕರೆ ವಿತರಣೆಯ ಬಗ್ಗೆ, ಸೀಮೆಎಣ್ಣೆಯ ವಿತರಣೆಬಗ್ಗೆ ಚುನಾವಣೆಯ ಸಂದರ್ಭದಲ್ಲಿ ಹೇಳುತ್ತಿದ್ದರು, ನಾವು ಅಧಿಕಾರಕ್ಕೆ ಬಂದತಕ್ಷಣ ಸೀಮೆಎಣ್ಣೆ ನಲ್ಲಿಯಲ್ಲಿ ಹರಿಸುತ್ತೇವೆ, ಹಾಲು ದೊರೆಯುವಂತೆ ಮಾಡುತ್ತೇವೆ ಮತ್ತು ಸಕ್ಕರೆಯನ್ನು ಎಲ್ಲಾ ಕಡೆ ಉದರಿಸುತ್ತೇವೆಂದೆಲ್ಲ ಹೇಳಿದ್ದರು. ಆದರೆ ಈಗ ಅದರ ತದ್ವಿರುದ್ಧವಾಗಿ ಬೆಲೆಗಳು ಮತ್ತಷ್ಟು ಏರಿಕೆಯಾಗಿರುವುದನ್ನು ಜನ ಕಾಣುತ್ತಿದ್ದಾರೆ. ಸಕ್ಕರೆ, ಸೀಮೆಎಣ್ಣೆಯ ವಿಷಯ ಇರಲಿ ಮಂಗಳ ಸೂತ್ರವನ್ನು ಮಾಡಿಸಿಕೊಳ್ಳಲು ಬಹಳ ಕಷ್ಟವಾಗಿರುತ್ತದೆ. ಚಿನ್ನದಬೆಲೆ ವಿಪರೀತವಾಗಿ ಏರಿರುತ್ತದೆ. ಆಗ ೫೦ ರೂಪಾಯಿ ಜಾಸ್ತಿಯಾಗಿದ್ದುದು ಈಗ ೨೦೦ ರೂಪಾಯಿಗಳವರೆಗೆ ಜಾಸ್ತಿಯಾಗಿರುತ್ತದೆ. ಇದಕ್ಕೆ ಏನು ಹೇಳುತ್ತೀರೆಂದು ಕೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಚುನಾವಣೆಯ ವಿಷಯ, ಚಿನ್ನದ ವಿಷಯ ಆದನ್ನೆಲ್ಲ ಮಾತನಾಡುವುದಕ್ಕೆ ಬೇರೆ ಸಮಯವಿರುತ್ತದೆ. ಆ ಸಮಯದಲ್ಲಿ ಅದಕ್ಕೆಲ್ಲ ಉತ್ತರವನ್ನು ಕೊಡುತ್ತೇನೆ. ಆದರೆ ಈಗ ಮುಖ್ಯವಾಗಿ ರೂಲ್ ನಂ. ೫೧೨ರ ಬಗ್ಗೆ ಎಷ್ಟು ಮಾತನಾಡಬೇಕೋ ಅಷ್ಟನ್ನು ಮಾನ್ಯ ಮಿತ್ರರು ಮಾತನಾಡಬೇಕೆಂದು ಹೇಳುತ್ತೇನೆ.

†Sri A. Laxmi Sagar.—Further the prices of ragi have also increased. The retail price of ragi is 1-50 per K.G. Then bansi wheat price has also been increased from Rs, 1. 90 to Rs. 2 15 per Kg, price of all kinds of condiments have also gone up by Rs. 1/- per Kg, the price of popular cloth has also gone up by 4-5 percent. Now it has become the sellers market; it is no longer a buyers ' market.

With regard to the levy sugar, it is being supplied at Rs. 2 85 and the quota per person is 500 grammes per month. It is hardly sufficient for an individual to get sugar during the course of the month. He has no other go than to buy the sugar from the free market at to for several times higher than the control price.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಪೊಳ್ಳು ಆಶ್ವಾಸನೆಗಳನ್ನು ಕೊಟ್ಟೇ ಈ ಸರ್ಕಾರ ಅಧಿಕಾರಕ್ಕೆ ಬಂದಿರುವುದು. ಆ ರೀತಿಯಾದ ಆಶ್ವಾಸನೆಗಳನ್ನು ಕೊಡದಿದ್ದರೆ ನಿಮ್ಮ ಸರ್ಕಾರವು ಬರುತ್ತಲೂ ಇರಲಿಲ್ಲ. ನಾವು ಈ ರೀತಿ ಕೇಳುತ್ತಲೂ ಇರಲಿಲ್ಲ.

Sri A. Laxmi Sagar.—And the levy sugar is not available to the r tion cord holders. Therefore, they are compelled to buy the sugar in the open market at higher rate. There have been allegations that the levy sugar is finding its way to the black-market with the collu tion of the departmental officers. Though it is brought to the notice of the officers at higher levels no action has been taken. They look all these things with utter collousness.

Then about edibile oil it was Rs. 82 per quintal some week ago. But now it is 97 rupees per quintal The retail price of oil is Rs. 10-11 per Kg. Then kerosene is also not available to the consumers. Everywhere 'no stock' board is put. Cement is also not available with the result building work is hampered; there is diesel

† indicates that remarks or speeches have not been revised by the member concerned.

shortage everywhere. There are long queues in every petrol bunk. The price of cooking gas has also gone up. Cigarettes of particular brand are not available This is the situation prevailing everywhere. I should like to know what steps the Government has taken to ease the situation ? For the benefit of hon members I may mention that I have gone through the list of official prices prepared by the chief Marketing Officer, on which basis I am making this statement. ಈ ರೀತಿ ಬೆಲೆಗಳು ಜಾಸ್ತಿಯಾಗುತ್ತ ಹೋಗುತ್ತಿರುವುದರಿಂದ ಜನರಿಗೆ ಬಹಳ ಕಷ್ಟವಾಗಿರುತ್ತದೆಂದು ಹೇಳುತ್ತಿದ್ದರೆ, ತಾವು ಬೆಲೆಗಳು ಜಾಸ್ತಿಯಾಗಿಲ್ಲ, ಬಡವರಿಗೆ ಏನೂ ತೊಂದರೆಯಾಗಿಲ್ಲ, ನನ್ನನ್ನು ಕುಳಿತುಕೊಳ್ಳಿ ಎಂದು ತಾವು ಹೇಳುತ್ತಿರುವುದು ಸರಿಯಲ್ಲ. ನಿಮ್ಮ ಕಾನೂನು ಪುಸ್ತಕದಲ್ಲಿ ಮಾತ್ರ ಇರುತ್ತದೆ, ಕಾರ್ಯತಃ ಏನು ಅನುಕೂಲ ಮಾಡುತ್ತಿಲ್ಲ. ದಿನನಿತ್ಯ ಮನುಷ್ಯ ತಿನ್ನುವುದಕ್ಕೆ ಸಾಕಷ್ಟು ಆಹಾರ ಪದಾರ್ಥಗಳು ಸಿಕ್ಕದೇ ಹೋದರೆ ನಿಮ್ಮ ಕಾನ್‌ಸ್ಟಿಟ್ಯೂಷನ್ ಏತಕ್ಕೆ ಇರಬೇಕು, ನಿಮ್ಮ ಮಂತ್ರಿ ಮಂಡಲ ಏತಕ್ಕೆ ಇರಬೇಕು. ನಾವು ಏತಕ್ಕೋಸ್ಕರವಾಗಿ ಇಷ್ಟೊಂದು ಜನ ಇಲ್ಲಿ ಬಂದು ಕುಳಿತಿದ್ದೇವೆ. ಎಂದು ಕೇಳುತ್ತೇನೆ. ನಾನೂ ಕೂಡ ಲಾಯರ್ ಆಗಿರುತ್ತೇನೆ. ಲಾ ಕಾಲೇಜ್ ಪ್ರೊಫೆಸರ್ ಆಗಿರು ತ್ತೇನೆ. ನನಗೂ ಕಾನೂನು ಏನು ಎಂಬುದು ತಿಳಿದಿರುತ್ತದೆ. During the last 44 days this is the stark reality and the consumer is groaning under continuous rise of prices of essential commodities Therefore, I should like to know from the the Government including the Hon. Chief Minister, what effort have been made since they assumed office on 12th Jan 1980 to assuage the feelings of the people by taking effective action to stablise the prices of essential commodities? Today, the price of every article has been rising every day. My hon. friends in the Treasury Benches say that there is no rise in prices; every thing is quite alright. the basis of assurance they have given to the people, what action the Government has taken to control the price of these essential commodities. I want to know whether they have made use of Essential Commdities Act and taken action against those black marketeers and controlled the price rise ?

2.30 P.M.

SRI B. B. SAYANAK.— Mr. Speaker Sir, when I got up to speak you asked me to sit down. When Sri Lakshmisagar got up to speak, you allowed him.

MR. SPEAKER.— I was about to call you. By that time the other member began to speak.

SRI B. B. SAYANAK.— No Sir. This is a most important subject on which everybody here would like to speak. This is a subject pertaining to the entire Population of 3 crores of people in Karnataka. If you are not allowing this subject for discussion, you will be curtailing the right of the people. Therefore, I request you to consider this point and allow this subject to be discussed at full length the whole of to-day.

MR. SPEAKER.— That is for the House to decide.

SRI B. B. SAYANAK.— This subject must be given one full day for discussion. No other provision of rules should come in the way of discussion of this subject; This is a very important subject. The prices of essential commodities are soaring like anything. At the time of election to the Lok Sabha, assurances were given by the then president of Congress (I) Party Smt. Indira Gandhi that the prices will be brought down But no action has been taken so far.

ಶ್ರೀ ಮಳ್ಳೂರ್ ಆನಂದ ರಾವ್.— ನಾನು ಈಗ ಒಂದು ಕ್ರಿಯಾ ಲೋಪವನ್ನು ಎತ್ತುತ್ತಿದ್ದೇನೆ. ಈಗ ಮಂತ್ರಿ ಮಂಡಲ ರಚನೆ ಆಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಇಲ್ಲಿ ಯಾರೂ ಮಂತ್ರಿಗಳೇ ಇಲ್ಲ. ಜೊತೆಗೆ ಆಹಾರ ಮಂತ್ರಿಗಳು ಯಾರು ? ಈಗ ನಡೆಯುತ್ತಿರತಕ್ಕಂತಹ ಚರ್ಚೆಗೆ ಉತ್ತರ ಕೊಡುವವರು ಯಾರು? ಸಭೆಗೆ ಈ ವಿಷಯ ಯಾವುದೂ ಗೊತ್ತಿಲ್ಲದೇ ಚರ್ಚೆ ನಡೆಯುತ್ತಿದೆ.

ಅಧ್ಯಕ್ಷರು.— ಮುಖ್ಯಮಂತ್ರಿಗಳು ಇದ್ದಾರಲ್ಲಾ

ಶ್ರೀ ಮಳ್ಳೂರ್ ಆನಂದ ರಾವ್.— ಮಂತ್ರಿಗಳು ಒಬ್ಬರೂ ಇಲ್ಲವಲ್ಲ. ಎಲ್ಲಿ ಹೋದರು?

ಅಧ್ಯಕ್ಷರು. — ೩ ಜನ ಇದ್ದಾರಲ್ಲ.

ಶ್ರೀ ಮಳ್ಳೂರ್ ಆನಂದ ರಾವ್ — ಈಗ ಆಹಾರ ಇಲಾಖೆಯ ಮೇಲೆ ಚರ್ಚೆ ನಡೆಯುತ್ತಿರಬೇಕಾದರೆ ಆ ಇಲಾಖೆಯ ಮಂತ್ರಿಗಳು ಯಾರು ಎಂಬುದು ಗೊತ್ತಿರಬೇಕಲ್ಲವೆ ?

ಶ್ರೀ ಜೆ ಎಚ್ ಪಟೇಲ್.— ಈಗ ಪರ್ಚೇಸಿಂಗ್ ಪವರ್ ಜಾಸ್ತಿಯಾಗಿರುವುದರಿಂದ ಮಂತ್ರಿಗಳೆಲ್ಲಾ ಮಾರ್ಕೆಟ್ಟಿಗೆ ಹೋಗಿದ್ದಾರೆ. (ನಗು)

ಶ್ರೀ ಎ. ಲಕ್ಷ್ಮಿಸಾಗರ್.— ಮಂತ್ರಿಗಳು ಇನ್ನು ಮಾರ್ಕೆಟ್ಟಿಗೆ ಹೋಗಿಲ್ಲ. ಬೆಲೆ ವಿಚಾರಿಸುವುದಕ್ಕೆ ಹೋಗಿದ್ದಾರೆ.

ಶ್ರೀ ಮಳ್ಳೂರ್ ಆನಂದ ರಾವ್. This is a question of privilege of the Hous . I would like to know to who is the Minister in charge of this. ಮಂತ್ರಿಗಳೇ ಗೊತ್ತಿಲ್ಲದೆ ಸಭೆಯ ಕಾರ್ಯಕಲಾಪಗಳು ನಡೆಯುತ್ತಿವೆ. ಮಂತ್ರಿಗಳೆಲ್ಲಾ ಪ ಮಾಣ ವಚನ ಸ್ವೀಕಾರ ಮಾಡಿದ್ದಾರೆ. ಆದರೆ ಇಲ್ಲಿ ಯಾರೂ ಇಲ್ಲ. ಎಲ್ಲಾ ಅಧಿಕಾರವನ್ನೂ ಮಾನ್ಯ ಗುಂಡೂ ರಾಯರಿಗೆ ವಹಿಸಿಬಿಟ್ಟಿದ್ದಿರಾ ?

ಅಧ್ಯಕ್ಷರು — ಆಹಾರ ಇಲಾಖೆ ಮುಖ್ಯ ಮಂತ್ರಿಯವರಿಗೇ ಸೇರಿದೆ. ಅವರೇ ಉತ್ತರ ಕೊಡುತ್ತಾರೆ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಮಳ್ಳೂರ್ ಆನಂದ ರಾವ್.— ಹಾಗಾದರೆ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕ್ಷಣದಲ್ಲಿ ಯಾರೂ ಇಲ್ಲವೇ ?

ಅಧ್ಯಕ್ಷರು.— ಮುಖ್ಯ ಮಂತ್ರಿಗಳೇ ಆ ಖಾತೆಯನ್ನು ವಹಿಸಿಕೊಂಡಿದ್ದಾರೆಂದು ಹೇಳುತ್ತಿದ್ದೇನೆ ಆದರೂ ಏತಕ್ಕೆ ಕೇಳುತ್ತಿದ್ದೀರಿ ?

ಶ್ರೀ ಆರ್. ಗುಂಡೂರಾವ್ — ರೂಲ್ ೩೧೨ರ ಕೆಳಗೆ ಮಾನ್ಯ ಲಕ್ಷ್ಮಿಸಾಗರ್ ಅವರು ಆಹಾರದ ಬೆಲೆ ವಿಷಯವಾಗಿ ಕಳಕಳಿಯಿಂದ ಹೇಳುತ್ತಿದ್ದಾರಲ್ಲಾ, ಅದು ಮಾನ್ಯ ಆನಂದ ರಾಯರಿಗೆ ಬೇಕಾಗಿಲ್ಲ. ಸರ್ಕಾರದ ಪರವಾಗಿ ಮುಖ್ಯ ಮಂತ್ರಿ ಉತ್ತರ ಕೊಡದೇ ಇದ್ದರೆ ಬೇರೇ ಯಾರಾದರೂ ಮಂತ್ರಿಗಳು ಉತ್ತರ ಕೊಡುತ್ತಾರೆ. ಆ ಬಗ್ಗೆ ಇವರಿಗೆ ಏಕೆ ಯೋಚನೆ. ಮಾನ್ಯ ಜೆ. ಎಚ್. ಪಟೇಲರು, ಮಾನ್ಯ ಮಂತ್ರಿಗಳೆಲ್ಲಾ ಮಾರ್ಕೆಟ್ಟಿಗೆ ಹೋಗಿದ್ದಾರೆ ಎಂದು ಹೇಳಿದರು. ಮಾನ್ಯ ಜೆ. ಎಚ್. ಪಟೇಲರು ಮಂತ್ರಿ ಆಗುತ್ತೇನೆ ಎಂದು ಮಾರ್ಕೆಟ್ ತೆಗೆದುಕೊಂಡು ಬಂದಿದ್ದರು. ಮಾರ್ಕೆಟ್ ಡೌನ್ ಆಯಿತು. ಇವರು ಮಂತ್ರಿ ಆಗಲಿಲ್ಲ. ವಾಪಸ್ ಹೋದರು.

ಶ್ರೀ ಜೆ. ಎಚ್. ಪಟೀಲ್.— ನಾನು ಆ ಕಡೆ ಹೋದೆ ಎಂದು ಅವರು ಈ ಕಡೆ ಬಂದರು, ಈಗ ಸ್ವಾಭಾವಿಕವಾಗಿ ಅವರು ಆ ಕಡೆ ಇದ್ದಾಗ ನಾನು ಈ ಕಡೆ ಬರಬೇಕಲ್ಲವೆ ?

SRI B. B. SAYANAK.— I am telling that the prices of essential articles are soaring like anything. There is nobody to stop or to bring down prices. The condition of the poor man has become worse now. The present Prime Minister at the time of Lok Sabha election was very enthusiastically telling that she would bring down the prices if the people vote them to power. What have they done? Nothing. It seems no sincere efforts were made to bring down the prices. At the time of election, the present Prime Minister was telling that the Janatha Party was responsible for the increase in prices of the essential articles, and if the people vote them to power, they will certainly look to it and bring down the prices. Did they do it? No action is taken. At the time Janatha Government was in power, the price of the sugar had not gone beyond Rs. 2.25. Now what is the price of sugar ? It has gone up to Rs. 8.20 a Kg. What is the price of essential article like edible oil? It has gone up trible or even 4 times the price during the Janatha Government. Diesel oil is not available. Cement is not available. The prices have gone up tremendously which is beyond the reach of a common man.

ಶ್ರೀ ಆರ್. ಗುಂಡೂರಾವ್.— ಶ್ರೀ ಸಯಾನಕ್ ಅವರು ಬ್ರಹ್ಮಚಾರಿಗಳು, ಅವರಿಗೆ ಏಕೆ ಸಕ್ಕರೆ ಬೇಕು. ?

ಶ್ರೀ ಮಳ್ಳೂರ್ ಆನಂದ ರಾವ್.— ಬ್ರಹ್ಮಚಾರಿಗಳಿಗೆ ಸಕ್ಕರೆ ಬೇಡವೆಂದು ಎಲ್ಲಿ ಹೇಳಿದೆ ?

SRI B. B. SAYANAK.— Mr. Chief Minister, You are playing with the life of common man. You are cutting jokes. This is not the time for cutting jokes. You must be serious about this. What is the price of even bread that are available in the market and which is the important article for ryots. The diesel is not available for transportation of things. Agriculturists are not benefitted in any respect. Even Kerosene is not available. Even fire-wood is not available. On account of the non-availability of the diesel, the lorries are not available to bring firewood. There are so many pumpset in Belgaum Taluka. They are running in diesel only, but there is shortage of diesel. So our crops are whithering away. The suppliers are charging exhorbitant rates for firewood and also for the charcoal. The present Prime Minister was telling that they would do their best to supply atleast the quantity of gold required for preparation of "Mangala Suthra". Are they supplying ? No promise made during the time of election has been kept up. I can speak hours together on this subject. But I have no time. Kindly allow us a day for discussion of this subject which is a very important subject concerning the poor people of the State. The downtrodden peoples are helpless and they

are struggling hard to live. Where should they bring money ? In the name of the poor and down-trodden the present Government has come to power. The Chief Minister should make all out efforts to bring down the prices of essential commodities and help the poor people. With these few words I thank the Chair and conclude my speech.

† ಶ್ರೀ ಎ. ಜಿ. ಕೊಡಗಿ (ಬೈಂದೂರು).— ಸನ್ಮಾನ್ಯ ಅಧ್ಯಕ್ಷರೆ, ನಾನು ರೂಲ್ ೬೩ರ ಪ್ರಕಾರ ನೋಟೀಸ್ ಕಳುಹಿಸಿಕೊಟ್ಟಿದ್ದೆ. ತಾವು ಈಗ ಅದನ್ನು ರೂಲ್ ೫೧ಕ್ಕೆ ಕನ್‌ವರ್ಟ್ ಮಾಡಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಈ ಸಂದರ್ಭದಲ್ಲಿ ನಾನು ಅಧ್ಯಕ್ಷರವರಲ್ಲಿ ಪ್ರಾರ್ಥಿಸಿಕೊಳ್ಳುವುದು ಇಷ್ಟೇ ಇದರ ಬಗ್ಗೆ ನಾನು ಮಾತನಾಡುವಾಗ ಕಾಲವನ್ನು ಮಿತಿ ಮಾಡದೇ ಕಾಲಾವಕಾಶ ಒದಗಿಸಿಕೊಡಬೇಕು. ಈಗ ನಾನು ಬೇರೆ ಸದಸ್ಯರು ಹೇಳಿರತಕ್ಕ ವಿಚಾರಗಳನ್ನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇವೊತ್ತು ಆಹಾರ ಸಾಮಾಗ್ರಿಗಳ ಬೆಲೆಗಳು ಗಗನಕ್ಕೆ ಏರಿರುವುದು ಸ್ಪಷ್ಟವಾಗಿ ಎಲ್ಲರಿಗೂ ಕೂಡ ಗೊತ್ತಿದೆ. ಈಗಾಗಲೇ ಅದರ ಮಾಹಿತಿ ಆಧಾರದ ಮೇಲೆ ಮಾನ್ಯ ಸದಸ್ಯರು ವಿವರಣೆ ಕೊಟ್ಟಿದ್ದಾರೆ. ಅಧ್ಯಕ್ಷರೆ, ಈಗಿನ ಸರ್ಕಾರದವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಜನಸಾಮಾನ್ಯರಿಗೆ ಬೇಕಾಗತಕ್ಕ ಅಗತ್ಯ ವಸ್ತುಗಳ ಬೆಲೆಗಳನ್ನು ಇಳಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಶ್ರೀಮಾನ್ ಗುಂಡೂರಾವ್ ಅವರು ಸರ್ಕಾರದ ಆಡಳಿತವನ್ನು ವಹಿಸಿಕೊಂಡ ಮೇಲೆ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೆ ಏರುತ್ತಿರುವುದನ್ನು ನಾವು ಕಂಡಿದ್ದೇವೆ. ಇವೊತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕೆ.ಜಿ. ಸಕ್ಕರೆ ಬೆಲೆ ಎಂಟು ರೂಪಾಯಿ ಇಪ್ಪತ್ತು ಪೈಸೆ ಇದೆ. ಜನರು ಸಹಕಾರ ಸಂಘಗಳಲ್ಲಿ ಸಕ್ಕರೆ ಇಲ್ಲ ಅಂತ ಮನೆಗೆ ಹೋಗುತ್ತಿದ್ದಾರೆ. ಸೊಸೈಟಿಗಳ ಬಳಿ ದಿನಗಟ್ಟಲೆ ಕಾದರೂ ಕೂಡ ಸೀಮೆ ಎಣ್ಣೆ ಸಿಕ್ಕುವುದಿಲ್ಲ. ಬೇಸಾಯಗಾರರು ಡೀಸಲ್ ಸಿಕ್ಕದೆ ಇರುವುದರಿಂದ ಅವರು ತಮ್ಮ ಪಂಪ್‌ಸೆಟ್ಟುಗಳನ್ನು ಚಾಲೋ ಮಾಡುವ ಹಾಗೆ ಇಲ್ಲ. ಇವೆಲ್ಲದಕ್ಕೂ ಕಾರಣ ಏನು ಅಂತ ನೋಡಬೇಕಾಗುತ್ತದೆ. ಯಾರೇ ಆಗಲಿ ಆಶ್ವಾಸನೆ ಕೊಟ್ಟ ತಕ್ಷಣ ಬೆಲೆ ಹತೋಟಿಗೆ ತರಲಿಕ್ಕೆ ಸಾಧ್ಯವಾಗುವುದಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳಾದ ಗುಂಡೂರಾವ್ ಅವರು ಮಂಗಳೂರಿಗೆ ಬಂದಾಗ ಒಂದು ಗುಂಡು ಹಾರಿಸಿದರು. ಇದು ಹುಸಿ ಗುಂಡು ಎಂದು ಜನರಿಗೆ ಗೊತ್ತಾಯಿತು. ಇದುವರೆಗೆ ಇದ್ದಂಥ ಮೂರು ಜನ ಮಂತ್ರಿಗಳು ನಲವತ್ತೈದು ದಿವಸಗಳನ್ನು ತಮ್ಮ ಸಮಾರಂಭಗಳಲ್ಲಿಯೇ ಕಳೆಯುತ್ತಾ ಬಂದಿದ್ದಾರೆ. ಹೆಲಿಕ್ಯಾಪ್ಟರ್‌ನಲ್ಲಿ ಸಂಚಾರ ಮಾಡಿಕೊಂಡು ಸಮಾರಂಭಗಳಲ್ಲಿ ಭಾಗವಹಿಸಿಕೊಂಡು ತಾವು ಮಾಡಬೇಕಾದಂಥ ಕೆಲಸದ ವೇಳೆಯನ್ನು ವ್ಯಯ ಮಾಡಿದ್ದಾರೆ. ವಿಧಾನ ಸೌಧದಲ್ಲಿ ಒಂದೂವರೆ ತಿಂಗಳ ಕಾಲ ಆಡಳಿತ ಸ್ಥಗಿತವಾಗಿತ್ತು. ಮಾನ್ಯ ಗುಂಡೂರಾವ್ ಅವರು ಕಳ್ಳ ವ್ಯಾಪಾರಿಗಳನ್ನು ಹಿಡಿದು ಒಳಗೆ ಹಾಕುತ್ತೇವೆ ಎಂದು ಹೇಳಿದ್ದಾರೆ. ಅದು ಇವರಿಂದ ಆಗುವುದಿಲ್ಲ. ಏಕೆಂದರೆ ಈ ಸನ್ಮಾನ ಸಮಾರಂಭಗಳನ್ನು ಏರ್ಪಡಿಸಲಿಕ್ಕೆ ಕಳ್ಳ ವ್ಯಾಪಾರಿಗಳು ಹಣ ಕೊಟ್ಟಿರುತ್ತಾರೆ. ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೊತ್ತಿದೆ. ಈ ಕಳ್ಳ ವ್ಯಾಪಾರಿಗಳು ಇವರನ್ನು ಹೆಲಿಕ್ಯಾಪ್ಟರ್‌ನಲ್ಲಿ ಕರೆಯಿಸಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಸನ್ಮಾನ ಸಮಾರಂಭಗಳನ್ನು ಮಾಡಿದ್ದಾರೆ, ಆದುದರಿಂದ ಇವರುಗಳ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಆಗುವುದಿಲ್ಲ.

ಇನ್ನು ಆಹಾರ ಸಾಮಗ್ರಿಗಳ ವಿಚಾರದ ಬಗ್ಗೆ ಹೇಳಬೇಕು ಅಂದರೆ ಇದುವರೆಗೂ ಸಹಕಾರ ಸಂಘಗಳ ಮುಖಾಂತರ, ನ್ಯಾಯಬೆಲೆ ಅಂಗಡಿಗಳ ಮುಖಾಂತರ ಜನತೆಗೆ ಸಾಕಷ್ಟು ಆಹಾರ ಧಾನ್ಯ, ಸಕ್ಕರೆ ಮುಂತಾದವುಗಳು ದೊರಕುತ್ತಿತ್ತು. ಈಗ ಸಾಕಷ್ಟು ಪ್ರಮಾಣದಲ್ಲಿ ನಮಗೆ ದೊರಕದೇ ಇರುವುದು ನಮ್ಮ ದೌರ್ಭಾಗ್ಯ. ಕೆಲವು ಕಡೆ ನಮ್ಮ ಪಕ್ಷದಿಂದ ಕೆಲಸ ಮಾಡಿದ್ದೇವೆ ಎನ್ನುವ ಒಂದೇ ಕಾರಣದಿಂದ ಕೂಡ ತಕ್ಕಂತಹ ಆಹಾರ ಸಾಮಗ್ರಿಗಳ ಪ್ರಮಾಣವನ್ನು ಕಡಿಮೆ ಮಾಡಿದ್ದಾರೆ. ಮೊದಲು ಸಹಕಾರ ಸಂಘಗಳ ಮೂಲಕ ಸೀಮೆಎಣ್ಣೆ ದೊರಕುತ್ತಿತ್ತು. ಈಗ ಚುನಾವಣೆ ಕಳೆದ ನಂತರ ಸೀಮೆಎಣ್ಣೆ ಸಿಕ್ಕುವುದು ಬಹಳ ಕಷ್ಟವಾಗಿದೆ. ಕಾರಣ ಅಂದರೆ ಮಾನ್ಯ ಮಂತ್ರಿಗಳು ಸಂಚಾರ ಹೋದಾಗ ಯಾವ ಯಾವ ಅಧ್ಯಕ್ಷರು ನಮ್ಮ ಪಕ್ಷಕ್ಕೆ ವಿರುದ್ಧವಾಗಿ ಮಾಡಿದ್ದಾರೆ ಅವರನ್ನು ನಮ್ಮ ಹತೋಟಿಯಲ್ಲಿ ತರಬೇಕು, ನೀವು ಇವರಿಗೆ ಒದಗಿಸಬೇಡಿ ಎಂದು ಹೇಳಿಬಂದಿರುವ ವಿಚಾರಗಳು ನಮ್ಮ ಗಮನಕ್ಕೆ ಬಂದಿವೆ, ಈಗ ಸದ್ಯಕ್ಕೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನಬಳಕೆ ವಸ್ತುಗಳಲ್ಲಿ ಅಕ್ಕಿ ಮಾತ್ರ ಹೆಚ್ಚು ಬೆಲೆಗೆ ಏರಿಲ್ಲ. ಆದರೆ ಬೆಲ್ಲ, ಸಕ್ಕರೆ

ಸೀಮೆಎಣ್ಣೆ, ತೆಂಗಿನಕಾಯಿ, ಸಾಬೂನು, ಈ ತರಹ ದಿನಬಳಕೆಯ ವಸ್ತುಗಳ ಬೆಲೆಗಳನ್ನು ಪರಿಶೀಲನೆ ಮಾಡಿದರೆ ಕೇವಲ ನಲವತ್ತೈದು ದಿವಸಗಳಲ್ಲಿ ಶೇಕಡ ೫೦ರಿಂದ ೧೫೦ ಪಟ್ಟು ಹೆಚ್ಚಾಗಿದೆ. ಆದುದರಿಂದ ಈ ಸರ್ಕಾರ ಇರಲಿಕ್ಕೆ ನಾಲಾಯಕ್ಕು. ಮಾನ್ಯ ಮಂತ್ರಿಗಳು ಬರೀ ಆಶ್ವಾಸನೆ ಕೊಟ್ಟರೆ ಆಗುವುದಿಲ್ಲ. ಒಂದು ಕಾಲವನ್ನು ನಿಗದಿ ಮಾಡಿ ನಾವು ಇಷ್ಟು ಸಮಯದಲ್ಲಿ ಜನಸಾಮಾನ್ಯರಿಗೆ ಬೇಕಾಗತಕ್ಕ ಅಗತ್ಯ ವಸ್ತುಗಳನ್ನು ಸಹಕಾರ ಸಂಘಗಳ ಮೂಲಕ ಸೂಕ್ತ ಬೆಲೆಯಲ್ಲಿ ಒದಗಿಸಿ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಈ ಸದನದ ಮೂಲಕ ಕರ್ನಾಟಕದ ಜನತೆಗೆ ಒಂದು ಆಶ್ವಾಸನೆ ಕೊಡಬೇಕು. ಸಕ್ಕರೆ ಬೆಲೆ ನೋಡಿದರೆ ಕಳೆದ ನಲವತ್ತೈದು ದಿವಸಗಳಲ್ಲಿ ಎರಡೂ ರೂಪಾಯಿ ಇದ್ದುದು ಎಂಟು ರೂಪಾಯಿಗಳವರೆಗೆ ಹೋಗಿದೆ. ಶೇಕಡ ೧೫೦ರಿಂದ ೨೦೦ ಪಟ್ಟು ಹೆಚ್ಚಿದೆ. ಇದಕ್ಕೆ ಕಾರಣವನ್ನು ಸರ್ಕಾರದವರು ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ಯಾವರೀತಿ ಕ್ರಮ ಕೈಗೊಳ್ಳುತ್ತಾರೆ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕಾಗಿದೆ. ಕಳೆದ ನಲವತ್ತೈದು ದಿವಸಗಳಿಂದ ಸರ್ಕಾರದ ಆಡಳಿತ ಇರಲಿಲ್ಲ ಅನ್ನುವುದು ಜನರಿಗೆ ಚೆನ್ನಾಗಿ ಮನವರಿಕೆಯಾಗಿದೆ. ವಿರೋಧ ಪಕ್ಷದವರು ಮೂರು ಅಂಶಗಳ ಮೇಲೆ ಹೇಳುತ್ತಿದ್ದರು. ಒಂದು ಈರುಳ್ಳಿ, ಎರಡು ಸೀಮೆಎಣ್ಣೆ, ಮೂರು ಸಕ್ಕರೆ. ಈ ಮೂರು ಅಂಶಗಳ ಮೇಲೆ ಪ್ರಚಾರ ಮಾಡುತ್ತಾ ಸರ್ಕಾರ ಅವರ ಕೈಗೆ ಸಿಕ್ಕುತ್ತಲೇ ಬೆಲೆ ಕಡಿಮೆ ಮಾಡುತ್ತೇವೆಂದು ಹೇಳಿದವರು ಬೆಲೆ ಏರುತ್ತಿದ್ದರೂ ಸುಮ್ಮನೆ ಇದ್ದಾರೆ. ಈಗ ಒಂದು ಹೊಸ ವಿಚಾರ ಹೇಳಬೇಕು ಅಂದರೆ ಕೇಂದ್ರ ಸರ್ಕಾರದ ಆದೇಶವನ್ನು ರಾಜ್ಯ ಸರ್ಕಾರಗಳವರು ಪಾಲಿಸದೇ ಇರುವ ಕಾರಣದಿಂದ ಜನತೆಗೆ ತೊಂದರೆಯಾಗುತ್ತದೆ ಎನ್ನುವ ಕಾರಣವನ್ನು ಪ್ರಧಾನ ಮಂತ್ರಿಗಳು ಸೂಚಿಸಿ ಕೆಲವು ರಾಜ್ಯಗಳ ಸರ್ಕಾರವನ್ನು ವಿಸರ್ಜಿಸಿದರು. ಈಗ ಕೇಂದ್ರ ಸರ್ಕಾರದ ಕಾಂಗ್ರೆಸ್ (ಐ) ಸರ್ಕಾರ ಈ ರಾಜ್ಯದಲ್ಲಿ ಇದೆ. ಆ ಒಂದು ಆದೇಶ ಈ ಸರ್ಕಾರಕ್ಕೂ ಕೂಡ ಬಂದಿರುತ್ತದೆ. ಆ ವಿಚಾರದಲ್ಲಿ ಇವರು ಬೆಲೆ ಕಡಿಮೆ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಹೆಚ್ಚಾಗಿರುವ ಬೆಲೆಗಳನ್ನು ಕಡಿಮೆ ಮಾಡಲಿಕ್ಕೆ ಬರೀ ಆಶ್ವಾಸನೆ ಕೊಟ್ಟಿದ್ದಾರೆ. ಇನ್ನು ಕೆಲವಾರು ದಿವಸಗಳಲ್ಲಿ ವರ್ತಕರು ತಮ್ಮ ನಡತೆಯನ್ನು ಸರಿಪಡಿಸಿಕೊಳ್ಳದಿದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆಂದು ಪತ್ರಿಕೆಗಳಲ್ಲಿ ಹೇಳಿದ್ದಾರೆ. ಈಗ ಸುಗ್ಗಿಯ ಕಾಲ ಈ ಸುಗ್ಗಿಯ ಕಾಲದಲ್ಲಿಯೇ ಇಷ್ಟೊಂದು ಬೆಲೆಗಳ ಏರಿಳಿತವಾಗಿ ಕೆಲವು ದಿವಸಗಳು ಆದಮೇಲೆ ಮುಂದಿನ ಮಧ್ಯಂತರ ದಿನಗಳಲ್ಲಿ ಈ ಬೆಲೆಗಳು ಯಾವ ಮಟ್ಟಕ್ಕೆ ಹೋಗುತ್ತದೆ ಅನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಈಗ ತಾವು ಏನು ಆಶ್ವಾಸನೆ ಕೊಟ್ಟಿದ್ದೀರೊ ಅದು ಪೊಳ್ಳು ಆಶ್ವಾಸನೆ ಎಂದು ಜನರಿಗೆ ಅರ್ಥವಾಗುತ್ತಿದೆ. ಆಶ್ವಾಸನೆ ಕೊಟ್ಟ ಸರ್ಕಾರ ಅಧಿಕಾರದಲ್ಲಿದ್ದು ಏನು ಕ್ರಮ ತೆಗೆದುಕೊಂಡಿದೆ? ಕಳ್ಳ ವ್ಯಾಪಾರಿಗಳನ್ನು ಜೈಲಿಗೆ ಕಳುಹಿಸಲಿಕ್ಕೆ ಪ್ರಿವೆಂಟೀವ್ ಡಿಟೆಕ್ಷನ್ ಆಕ್ಟ್ ಇದೆ. ಯಾರೋ ಒಬ್ಬ ಒಂದು ಸ್ವಲ್ಪ ಸೀಮೆಎಣ್ಣೆ ಅಕ್ರಮ ದಾಸ್ತಾನು ಇಟ್ಟಿದ್ದ ಅವನ ಮೇಲೆ ಕ್ರಮ ತೆಗೆದುಕೊಂಡಿರುವುದು ಪತ್ರಿಕೆಗಳಲ್ಲಿ ದೊಡ್ಡದಾಗಿ ಬಂತು. ಆದೇ ದೊಡ್ಡದೊಡ್ಡ ವರ್ತಕರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಬದಲಾವಣೆ ಆಗುವ ಸಮಯದಲ್ಲಿ ಎರಡೂ ಕಾಲು ರೂಪಾಯಿ ಇದ್ದುದು ಆಲ್ ಇಂಡಿಯಾ ರೇಡಿಯೋದಲ್ಲಿ ಬರುತ್ತಿತ್ತು. ಈಗ ಒಂದು ಕೆ. ಜಿ. ಸಕ್ಕರೆ ಆರು ರೂಪಾಯಿ ಆಗಿದೆ. ಈಗ ದೊಡ್ಡ ದೊಡ್ಡ ವರ್ತಕರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ, ತಾವು ಕೊಟ್ಟಂತಹ ಆಶ್ವಾಸನೆಯನ್ನು ಯಾವರೀತಿ ಈಡೇರಿಸುತ್ತೀರಾ ತಿಳಿಸಬೇಕು ಎಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಚಂದ್ರಶೇಖರ್ (ಜಯನಗರ).— ಸನ್ಮಾನ್ಯ ಅಧ್ಯಕ್ಷರೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷದವರು ಮೂರು ಅಂಶಗಳ ಮೇಲೆ ಹೇಳುತ್ತಿದ್ದರು. ಒಂದು ಈರುಳ್ಳಿ, ಎರಡು ಸೀಮೆಎಣ್ಣೆ, ಮೂರು ಸಕ್ಕರೆ. ಈ ಮೂರು ಅಂಶಗಳ ಮೇಲೆ ಪ್ರಚಾರ ಮಾಡುತ್ತಾ ಸರ್ಕಾರ ಅವರ ಕೈಗೆ ಸಿಕ್ಕುತ್ತಲೇ ಬೆಲೆ ಕಡಿಮೆ ಮಾಡುತ್ತೇವೆಂದು ಹೇಳಿದವರು ಬೆಲೆ ಏರುತ್ತಿದ್ದರೂ ಸುಮ್ಮನೆ ಇದ್ದಾರೆ. ಈಗ ಒಂದು ಹೊಸ ವಿಚಾರ ಹೇಳಬೇಕು ಅಂದರೆ ಕೇಂದ್ರ ಸರ್ಕಾರದ ಆದೇಶವನ್ನು ರಾಜ್ಯ ಸರ್ಕಾರಗಳವರು ಪಾಲಿಸದೇ ಇರುವ ಕಾರಣದಿಂದ ಜನತೆಗೆ ತೊಂದರೆಯಾಗುತ್ತದೆ ಎನ್ನುವ ಕಾರಣವನ್ನು ಪ್ರಧಾನ ಮಂತ್ರಿಗಳು ಸೂಚಿಸಿ ಕೆಲವು ರಾಜ್ಯಗಳ ಸರ್ಕಾರವನ್ನು ವಿಸರ್ಜಿಸಿದರು. ಈಗ ಕೇಂದ್ರ ಸರ್ಕಾರದ ಕಾಂಗ್ರೆಸ್ (ಐ) ಸರ್ಕಾರ ಈ ರಾಜ್ಯದಲ್ಲಿ ಇದೆ. ಆ ಒಂದು ಆದೇಶ ಈ ಸರ್ಕಾರಕ್ಕೂ ಕೂಡ ಬಂದಿರುತ್ತದೆ. ಆ ವಿಚಾರದಲ್ಲಿ ಇವರು ಬೆಲೆ ಕಡಿಮೆ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಹೆಚ್ಚಾಗಿರುವ ಬೆಲೆಗಳನ್ನು ಕಡಿಮೆ ಮಾಡಲಿಕ್ಕೆ ಬರೀ ಆಶ್ವಾಸನೆ ಕೊಟ್ಟಿದ್ದಾರೆ. ಇನ್ನು ಕೆಲವಾರು ದಿವಸಗಳಲ್ಲಿ ವರ್ತಕರು ತಮ್ಮ ನಡತೆಯನ್ನು ಸರಿಪಡಿಸಿಕೊಳ್ಳದಿದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆಂದು ಪತ್ರಿಕೆಗಳಲ್ಲಿ ಹೇಳಿದ್ದಾರೆ. ಈಗ ಸುಗ್ಗಿಯ ಕಾಲ ಈ ಸುಗ್ಗಿಯ ಕಾಲದಲ್ಲಿಯೇ ಇಷ್ಟೊಂದು ಬೆಲೆಗಳ ಏರಿಳಿತವಾಗಿ ಕೆಲವು ದಿವಸಗಳು ಆದಮೇಲೆ ಮುಂದಿನ ಮಧ್ಯಂತರ ದಿನಗಳಲ್ಲಿ ಈ ಬೆಲೆಗಳು ಯಾವ ಮಟ್ಟಕ್ಕೆ ಹೋಗುತ್ತದೆ ಅನ್ನುವುದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಈಗ ತಾವು ಏನು ಆಶ್ವಾಸನೆ ಕೊಟ್ಟಿದ್ದೀರೊ ಅದು ಪೊಳ್ಳು ಆಶ್ವಾಸನೆ ಎಂದು ಜನರಿಗೆ ಅರ್ಥವಾಗುತ್ತಿದೆ. ಆಶ್ವಾಸನೆ ಕೊಟ್ಟ ಸರ್ಕಾರ ಅಧಿಕಾರದಲ್ಲಿದ್ದು ಏನು ಕ್ರಮ ತೆಗೆದುಕೊಂಡಿದೆ? ಕಳ್ಳ ವ್ಯಾಪಾರಿಗಳನ್ನು ಜೈಲಿಗೆ ಕಳುಹಿಸಲಿಕ್ಕೆ ಪ್ರಿವೆಂಟೀವ್ ಡಿಟೆಕ್ಷನ್ ಆಕ್ಟ್ ಇದೆ. ಯಾರೋ ಒಬ್ಬ ಒಂದು ಸ್ವಲ್ಪ ಸೀಮೆಎಣ್ಣೆ ಅಕ್ರಮ ದಾಸ್ತಾನು ಇಟ್ಟಿದ್ದ ಅವನ ಮೇಲೆ ಕ್ರಮ ತೆಗೆದುಕೊಂಡಿರುವುದು ಪತ್ರಿಕೆಗಳಲ್ಲಿ ದೊಡ್ಡದಾಗಿ ಬಂತು. ಆದೇ ದೊಡ್ಡದೊಡ್ಡ ವರ್ತಕರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ಬದಲಾವಣೆ ಆಗುವ ಸಮಯದಲ್ಲಿ ಎರಡೂ ಕಾಲು ರೂಪಾಯಿ ಇದ್ದುದು ಆಲ್ ಇಂಡಿಯಾ ರೇಡಿಯೋದಲ್ಲಿ ಬರುತ್ತಿತ್ತು. ಈಗ ಒಂದು ಕೆ. ಜಿ. ಸಕ್ಕರೆ ಆರು ರೂಪಾಯಿ ಆಗಿದೆ. ಈಗ ದೊಡ್ಡ ದೊಡ್ಡ ವರ್ತಕರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ, ತಾವು ಕೊಟ್ಟಂತಹ ಆಶ್ವಾಸನೆಯನ್ನು ಯಾವರೀತಿ ಈಡೇರಿಸುತ್ತೀರಾ ತಿಳಿಸಬೇಕು ಎಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಳ್ಳೂರ್ ಆನಂದರಾವ್ (ರಾಜಾಜಿನಗರ).— ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾನು ರಾಜಕೀಯ ಬೆರೆಸುವುದಕ್ಕೆ ಇಷ್ಟಪಡುವುದಿಲ್ಲ. ಒಂದುಕಡೆ ಬೆಲೆಗಳು ಗಗನಕ್ಕೆ ಏರಿವೆ ಇನ್ನು ಕೆಲವು ವಸ್ತುಗಳು ಬಜಾರಿನಲ್ಲಿ ಸಿಕ್ಕುತ್ತಾ ಇಲ್ಲ ಯಾವು ಯಾವುದರ ಮೇಲೆ ತಾವು ಕಂಟ್ರೋಲ್ ಇಟ್ಟಿದ್ದೀರಿ ಅವುಗಳು ಸರಿ

ಯಾದ ಬೆಲೆಗೆ ಸಿಕ್ಕುತ್ತಾ ಇಲ್ಲ ಆದರೆ ಅದೇ ಪದಾರ್ಥಗಳನ್ನು ಹೊರಗಡೆ ಅದರ ನಿಗದಿಯಾದ ಬೆಲೆಗಿಂತ ಮೂರು ಪಟ್ಟು ಜಾಸ್ತಿ ಕೊಟ್ಟರೆ ಸಿಕ್ಕುತ್ತವೆ. ಇದರ ಜವಾಬ್ದಾರಿ ಮತ್ತು ಹೊಣೆಗಾರಿಕೆ ಯಾರದು ಎಂದು ತಾವು ತಿಳಿಸಬೇಕಾಗುತ್ತದೆ. ಈ ಪಾಪದ ಹೊಣೆ ಯಾರ ಮೇಲೆ ಇದೆಯೆಂದು ನಾವು ಕೇಳಬೇಕಾಗುತ್ತದೆ. ಉದಾಹರಣೆಗೆ ಸಕ್ಕರೆ ಬೆಲೆಯನ್ನು ನೋಡಿದರೆ. ಅದು ಗಗನಕ್ಕೆ ಹೋಗಿದೆ. ಕಾರ್ಡಿನಲ್ಲಿ ಸಕ್ಕರೆ ಸರಿಯಾಗಿ ಯಾರಿಗೂ ಸಿಕ್ಕುತ್ತಾ ಇಲ್ಲ. ಅದೇ ಒಂದು ಕೆಜಿಗೆ ೮ ರೂಪಾಯಿ ಕೊಟ್ಟರೆ ಹೊರಗಡೆ ಸಿಕ್ಕುತ್ತಾ ಇದೆ. ಇದಕ್ಕೆ ಕಾರಣವಾದರೂ ಏನು? ಇದಕ್ಕೆ ಕೇಂದ್ರ ಸರ್ಕಾರ ಹೊಣೆಯೇ ಅಥವಾ ರಾಜ್ಯ ಸರ್ಕಾರ ಹೊಣೆಯೇ? ಪತ್ರಿಕೆಯಲ್ಲಿ ಬಂದಿರುವಂತೆ ಇದಕ್ಕೆ ಕಾರಣ ದ್ವಿಮುಖ ಬೆಲೆಯನ್ನು ನಿಗದಿಗೊಳಿಸಿರುವುದರಿಂದ ಎಂದು ಬಂದಿದೆ? ಇದನ್ನು ರದ್ದು ಪಡಿಸುವವರು ಯಾರು? ಇವತ್ತು ಜನರಲ್ಲಿ ಹಾಹಾಕಾರವು ಪ್ರಾರಂಭವಾಗಿದೆ. ಕೆಜಿಗೆ ೮ ರೂಪಾಯಿ ಸಕ್ಕರೆ ಬೆಲೆಯಾಗಿದೆ ಇದನ್ನು ಸಾಮಾನ್ಯ ವ್ಯಕ್ತಿ ಕೊಂಡುಕೊಳ್ಳುವುದಕ್ಕೆ ಸಾಧ್ಯವಿದೆಯೇ? ಕಾರ್ಡಿನಲ್ಲಿ ೨ ರೂ ೭೫ ಪೈಸೆಗೆ ಸಿಕ್ಕುತ್ತಾ ಇದೆ ಆದರೆ ಆ ಬೆಲೆಯಲ್ಲಿ ಸಾಮಾನ್ಯ ಜನರಿಗೆ ಕೊಡುತ್ತಿದ್ದಾರೆಯೇ? ಜನಗಳಿಗೆ ಸಕ್ಕರೆ ಗತಿ ಏನು? ಈ ನ್ಯಾಯಬೆಲೆ ಅಂಗಡಿಗಳಲ್ಲಿ ತಪ್ಪು ಲೆಕ್ಕಗಳನ್ನು ಕೊಟ್ಟು ಅಲ್ಲಿ ಅವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಆದ್ದರಿಂದ ಈ ಆಹಾರ ಇಲಾಖೆ ಸಂಪೂರ್ಣವಾಗಿ ಕುಸಿದುಬಿದ್ದು ಹೋಗಿದೆ ಬೆಂಗಳೂರು ಮತ್ತು ಹಳ್ಳಿಗಾಡುಗಳಲ್ಲಿ ಸೀಮೆಎಣ್ಣೆ ಸಿಕ್ಕುತ್ತಾ ಇಲ್ಲ, ಅವರು ಯಾವರೀತಿ ಅಡಿಗೆ ಮಾಡಬೇಕು, ಮತ್ತೆ ಕಟ್ಟಿಗೆ ಸಂಯಾಗಿ ಸಿಕ್ಕುತ್ತಾ ಇಲ್ಲ ಗ್ಯಾಸ್ ಸಿಕ್ಕುತ್ತಾ ಇಲ್ಲ ಇನ್ನು ಸೀಮೆಎಣ್ಣೆ ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಅತ್ಯವಶ್ಯಕವಾಗಿ ಬೇಕಾದ್ದು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಸಕ್ಕರೆ ಇಲ್ಲದೆ ಹೇಗೆ ಕಾಫಿ ಕುಡಿಯುವುದು? ತಾವು ಈರೀತಿ ಮಾಡುತ್ತಾ ಇದ್ದೀರೆಂದು ಹೇಳುತ್ತಿಲ್ಲ? ಇನ್ನು ಒಂದು ಆಶ್ಚರ್ಯ ಸಂಗತಿ ಏನೆಂದರೆ. ಮೊನ್ನೆ ತಮ್ಮ ಆಹಾರ ಇಲಾಖೆಯ ಅಧಿಕಾರಿಗಳು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಯಾವ ಅವ್ಯವಹಾರವಾಗಲಿ, ಅಥವಾ ಬೆಲೆಗಳು ಏರಿರುವುದು ನಮ್ಮ ಗಮನಕ್ಕೆ ಬಂದಿಲ್ಲವೆಂದೂ ಮತ್ತು ಎಲ್ಲಾ ವ್ಯವಸ್ಥೆ ಸರಿಯಾಗಿದೆ ಎಂದು ಹೇಳಿದ್ದಾರೆ ಇದನ್ನು ನೋಡಿದರೆ ಇವರು ಎಷ್ಟು ಜಾಗ್ರತೆ ವಹಿಸಿದ್ದಾರೆಂದು ತಾವೆ ಯೋಚನೆ ಮಾಡಿ. ಇನ್ನು ಸಿಮೆಂಟು ಬಗ್ಗೆ ಹೇಳುವುದಾದರೆ ನನಗೆ ಸ್ವಲ್ಪ ರಿಪೇರಿ ಕೆಲಸಕ್ಕೋಸ್ಕರ ೧೫ ಮೂಟೆ ಬೇಕು ಎಂದು ಕೇಳಿದರೆ ಇನ್ನು ಬಂದಿಲ್ಲ ಎಂದು ಹೇಳಿದರು. ಆದರೆ ಒಂದು ಮೂಟೆಗೆ ೪೨ ರೂಪಾಯಿಯಂತೆ ಮಾರುತ್ತಾ ಇದ್ದಾರೆ. ಈರೀತಿ ಶಾಸಕರಿಗೇ ಆದರೆ ಇನ್ನು ಹಳ್ಳಿಗಾಡಿನ ಜನರಿಗೆ ಹೇಗೆ? ನಿಮ್ಮ ಆಹಾರ ಇಲಾಖೆ ಅಧಿಕಾರಿಗಳು ವ್ಯಾಪಾರಸ್ಥರ ಜೊತೆಯಲ್ಲಿ ಶಾಮೀಲಾಗಿದ್ದಾರೆಂದು ಹೇಳದೆ ವಿಧಿಯಿಲ್ಲ. ಇವರನ್ನೆಲ್ಲಾ ಮಿಲಿಟ್ರಿಗೆ ಕಳುಹಿಸಬೇಕಾಗುತ್ತದೆ ಇದರಲ್ಲಿ ಯಾರ ದೋಷ ಇದೆ? ಇದರ ಹೊಣೆಗಾರಿಕೆ ಯಾರ ಮೇಲೆ ಹೇರುವುದು?

ಶ್ರೀ ಎ. ಲಕ್ಷ್ಮೀಸಾಗರ್ (ಚಿಕ್ಕಪೇಟೆ).— ಅಧಿಕಾರಿಗಳೊಬ್ಬರದೆ ಅಲ್ಲ?

ಶ್ರೀ ಮಳ್ಳೂರು ಆನಂದರಾವ್.— ಉದಾಹರಣೆಗೆ ನಮ್ಮ ರಾಜಾಜಿನಗರದಲ್ಲಿ ಯಾವ ರೀತಿ ನಡೆಯುತ್ತಾ ಇದೆ ಎಂದರೆ ಅಲ್ಲಿನ ಜನರ ತೊಂದರೆಗಳನ್ನು ನಾವು ಹೇಳಲಿಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಿ? ಇದರ ಬಗ್ಗೆ ಎಲ್ಲಾ ಪಕ್ಷದ ಶಾಸಕರ ಒಂದು ಸಭೆಯನ್ನು ಕರೆಯುತ್ತೀರಾ? ಒಟ್ಟಿನಲ್ಲಿ ನಮಗೆ ಸರಿಯಾದ ರೀತಿಯಲ್ಲಿ ಜನರಿಗೆ ನ್ಯಾಯ ಬೆಲೆಯಲ್ಲಿ ಪದಾರ್ಥಗಳು ಸಿಕ್ಕುವಂತೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಕೆ.ಎಚ್. ಶ್ರೀನಿವಾಸ್ (ಸಾಗರ್).—ಸ್ವಾಮಿ ಒಂದು ಗಹನವಾದ ವಿಚಾರ ರೂಲ್ ೩೧೨ರ ಪ್ರಕಾರ ಇಷ್ಟು ದೀರ್ಘ ಚರ್ಚೆಯನ್ನು ಒಳಪಡಿಸುವುದಕ್ಕೆ ಕಷ್ಟಸಾಧ್ಯ ಆದ್ದರಿಂದ ನಾನು ಕ್ಲಿಪ್ತವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಚುನಾವಣೆ ಕಾಲದಲ್ಲಿ ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದೆವೋ ಅವುಗಳನ್ನೆಲ್ಲಾ ಪೂರೈಸುತ್ತಾ ಬಂದಿದ್ದಾರೆಂದು ಯಾವ ಸರ್ಕಾರದ ಮೇಲೂ ಹೇಳುವುದಕ್ಕೆ ಹೋಗುವುದಿಲ್ಲ. ಅದು ಗಂಭೀರವಾಗಿ ತೆಗೆದುಕೊಂಡಿದ್ದು ಇಲ್ಲ. ಅದನ್ನೇ ನಾವು ದೊಡ್ಡದು ಮಾಡುವುದು ಸರಿಯಲ್ಲ ಯಾವ ಪಕ್ಷದ ಸರ್ಕಾರವೇ ಅಧಿಕಾರಕ್ಕೆ ಬರಲಿ ಈಗ ಹಾಲಿ ಇರತಕ್ಕಂಥ ಸರ್ಕಾರ ಜನರ ಕಷ್ಟಸುಖಗಳನ್ನು ನೋಡಿಕೊಳ್ಳುವುದು ಅದರ ಜವಾಬ್ದಾರಿ ಜನತೆಗೆ ಜೀವನಾವಶ್ಯಕ ವಸ್ತುಗಳನ್ನು ಒದಗಿಸಿಕೊಡುವುದು ಸರ್ಕಾರದ ಕರ್ತವ್ಯ. ಬರೀ ಭಾಷಣ ಮಾಡಿದರೆ. ಸಾಲದು. ಇನ್ನು ಬೆಲೆ ಹತೋಟಿ ತರುವುದಕ್ಕೆ ಯಾವ ಸೂಕ್ತ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡಬೇಕು . ಎಲ್ಲವನ್ನೂ ಒಂದೇ ಕ್ಷಣದಲ್ಲಿ ಬಗೆಹರಿಸುತ್ತೇವೆಂದು ಭ್ರಮೆಪಟ್ಟುಕೊಳ್ಳುವುದಕ್ಕೆ

ತಯಾರಿಲ್ಲ. ಇದರಲ್ಲಿ ರಾಜ್ಯಸರ್ಕಾರದ ಹೊಣೆ ಅಥವಾ ಕೇಂದ್ರಸರ್ಕಾರದ ಹೊಣೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಬರೀ ರಾಜ್ಯ ಸರ್ಕಾರದ ಮೇಲೆ ಹೊಣೆ ಇದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಆದರೆ ರಾಜ್ಯ ಸರ್ಕಾರದ ಕೇಂದ್ರಸರ್ಕಾರಕ್ಕೆ ಸಹಕಾರ ಮತ್ತು ಸಹಾಯ ಇರಲೇಬೇಕಾಗುತ್ತದೆ. ಇದರ ಮೇಲೆ ಸರಿಯಾದ ಅನೇಕ ಕ್ರಮ ತೆಗೆದುಕೊಳ್ಳದೆ ಹೋದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದರೆ ಸಾಧ್ಯ. ಈಗ ಏರಿರತಕ್ಕಂಥ ಬೆಲೆಯನ್ನು ಗಮನಿಸಿದರೆ ಗಗನಕ್ಕೆಂತ ಮುಂದೆ ಸ್ಪೇಸ್‌ಗೆ ಹೋಗಿದೆ ಎಂದು ಹೇಳಬಹುದು. ಅಲ್ಲಿ ಯಾವ ರೀತಿಯಾದ ಅಡೆತಡೆಗಳು ಇರುವುದಿಲ್ಲವೆಂದು ಕೇಳಿದ್ದೇವೆ. ಆ ರೀತಿ ಈ ಬೆಲೆಗಳಿಗೆ ಯಾವರೀತಿ ಅಡೆತಡೆ ಇಲ್ಲದೆ ಹೋಗಿದೆ ಎಂದು ತಿಳಿದುಕೊಳ್ಳಬಹುದು. ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೋಗುತ್ತಿರುವ ಬೆಲೆಗಳ ಬಗ್ಗೆ ಒಂದು ನಿರ್ದಿಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆಯೇ ಎಂದು ಕೇಳುತ್ತಾ ಇದ್ದೇವೆ. ಇಷ್ಟು ದಿವಸ ನಡೆಯದ್ದು ನಡೆದಿದೆ, ಹೇಗೆ ನಡೆದಿದೆ? ಎಂದು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ತಾವು ಮುಖ್ಯಮಂತ್ರಿಗಳಾದ ಕೂಡಲೇ ಒಂದು ಮಾತು ಹೇಳಿದ್ದಿರಿ. ಆದರೆ ಮತ್ತೆ ವರ್ತಕರ ಮೇಲೆ ಸ್ವಲ್ಪ ಔದಾರ್ಯ ತೋರಿಸಿದ್ದೀರಿ? ನಾಳೆ ದಿವಸ ಜನ ಭೀತರಾಗಿ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ಮೇಲೆ ಕೆಲವು ದಿವಸಗಳ ಹಿಂದೆ ಯಾರು ಕಾಳ ಸಂತೆಯವರಿದ್ದಾರೆ ಅವರನ್ನು ಪತ್ತೆಹಚ್ಚಿ ಅವರ ಫೋಟೋಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆಂದು ಹೇಳಿದ್ದು ಆದರೆ ಪತ್ರಿಕೆಯಲ್ಲಿ ಮಾತ್ರ ಪದೇ ಪದೇ ಅವರ ಫೋಟೋಗಳನ್ನು ಹಾಕಿಸಿಕೊಳ್ಳುತ್ತಿದ್ದಾರೆಂದು ಜನರು ತಿಳಿದುಕೊಳ್ಳುವ ಹಾಗೆ ಮಾಡದೆ ತಾವು ಕಾಳಸಂತೆಕೋರರ ಫೋಟೋಗಳನ್ನು ಹಾಕಿಸಿ ? ಇಲ್ಲವೇ ಇತ್ತೀಚಿನ ತಮ್ಮ ಪತ್ರಿಕಾ ಹೇಳಿಕೆ ಪ್ರಕಾರ ಅವರು ಬಂದು ತಮ್ಮನ್ನು ಬೇಟಿ ಮಾಡಿ ಕಾಲಾವಕಾಶ ಕೊಡಿ, ನಾವು ಸರಿಯಾಗಿ ನಡೆದುಕೊಳ್ಳುತ್ತೇವೆಂದು ಹೇಳಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇತ್ತೀಚೆಗೆ ಪತ್ರಿಕೆಯಲ್ಲಿ ಫೋಟೋಗಳು ಬರುತ್ತಾ ಇರುವುದು ಶ್ರೀಮಾನ್ ವಾಟಾಳ್ ನಾಗರಾಜ್, ಶ್ರೀ ಎಫ್. ಎಂ. ಖಾನ್ ಮತ್ತು ಶ್ರೀಮಾನ್ ಗುಂಡೂರಾವ್ ಅವರದೇ.

ಶ್ರೀ ಕೆ. ಎಚ್. ಶ್ರೀನಿವಾಸ್.—ಒಂದು ಪ್ರಶ್ನೆ ಇವತ್ತು ಬಂದಿರುವುದು ಏನು ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆ ಬಂದಿದೆ. ಅದನ್ನು ನೋಡಿದರೆ ಅವರಿಗೆ ಇನ್ನಷ್ಟು ಕಾಲಾವಕಾಶ ಕೊಡಬೇಕೆಂದು ಪತ್ರಿಕೆಯವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಈ ಔದಾರ್ಯ ತೋರಿಸುವುದಕ್ಕೆ ಕಾರಣವೇನು ? ಇವತ್ತು ಕೊಟ್ಟಂತ ಹೇಳಿಕೆ ಪ್ರಕಾರ ಅವರು ತಮ್ಮನ್ನು ಬಂದು ಬೇಟಿ ಮಾಡಿ ಅವರು ಏನಾದರೂ ಕಾಲಾವಕಾಶ ಕೊಡಿ ನಾವು ಬುದ್ದಿ ಕಲಿತುಕೊಳ್ಳುತ್ತೇವೆಂದು ಹೇಳಿದ್ದಾರೆಯೇ ? ತಾವು ದಯಮಾಡಿ ಕಾಳಸಂತೆಕೋರರನ್ನು ಪತ್ತೆಮಾಡಿ ಕೆಲವರನ್ನಾದರೂ ಬಲಿ ಹಾಕಿದರೆ ಅದರಿಂದ ಉಳಿದವರಾದರೂ ಬುದ್ದಿ ಕಲಿತುಕೊಳ್ಳುತ್ತಾರೆ ಮೊದಲು ಅದನ್ನು ಮಾಡಿ.

ಒಬ್ಬ ಸದಸ್ಯರು.—ಇದು ಅವರ ಸರ್ಕಾರ ಆದ್ದರಿಂದ ಈ ಔದಾರ್ಯ ತೋರಿಸಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ತಾವು ಏನು ಹೇಳಿದ್ದಿರಿ ಅದನ್ನು ತಾವು ಗಂಭೀರವಾಗಿ ತೆಗೆದುಕೊಳ್ಳದೆ ಹೋದರೆ ಬಹಳ ಕಷ್ಟವಾಗುತ್ತದೆ. ಆದರೆ ಪ್ರತಿದಿವಸ ಮತ್ತು ಇಡೀ ದಿವಸ ಅದನ್ನೇ ಮಾಡಿ ಎಂದು ಹೇಳುವುದಿಲ್ಲ. ಇತ್ತೀಚೆಗೆ ತಮಗೆ ಕತ್ತಿ ಗುರಾಣಿ ಗದೆಗಳನ್ನು ಕೊಟ್ಟು ಜನರು ಸನ್ಮಾನ ಮಾಡುತ್ತಿದ್ದಾರೆ ಅದನ್ನು ಇಂತಹ ಕಾಳಸಂತೆ ಕೋರರನ್ನು ಬಲಿ ಹಾಕುವುದಕ್ಕೆ ಉಪಯೋಗ ಮಾಡಿ. ಅದನ್ನು ಬಿಟ್ಟು ಯಾವುದೇ ಪಕ್ಷ ಅಥವಾ ಕಾಂಗ್ರೆಸ್ ''ಯು'' ಪಕ್ಷದವರನ್ನು ಬಲಿ ಹೊಡಿಯುವುದಕ್ಕೆ ಹೋಗ ಬೇಡಿ. ನಾವು ಏನು ಅಂತಹ ಪಾಪ ಮಾಡಲಿಲ್ಲ. ಈಗಾಗಲೇ ಎಲೆಕ್ಷನ್ ಹೊಡೆತ ಬಿದ್ದಿದೆ ನಮ್ಮ ಶ್ರೀಮತಿ ಇಂದಿರಾ ಗಾಂಧಿಯವರ ಸಚಿವ ಸಂಪುಟದ ಮೂರು ಜನ ಸಚಿವರು ಒಬ್ಬೊಬ್ಬರು ಒಂದು ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಇದರ ಅರ್ಥ ನನಗೆ ಗೊತ್ತಾಗುತ್ತಿಲ್ಲ.

ಶುಗರ್ ಪಾಲಿಸಿಯನ್ನು ಅಮೂಲಾಗ್ರವಾಗಿ ಬದಲಾವಣೆ ಮಾಡಬೇಕು, ಎಂದು ಒಬ್ಬ ಸಚಿವರು ಹೇಳಿದರೆ, ಮತ್ತೊಬ್ಬ ಸಚಿವರು ಶುಗರ್ ಪಾಲಿಸಿ ಏನೂ ಆಗಿಲ್ಲ, ಚನ್ನಾಗಿದೆ ಎಂದು ಬೇರೆ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಇಂಥ ವ್ಯತ್ಯಾಸ ಬರುವಂಥ ಹೇಳಿಕೆಗಳನ್ನು ಸರ್ಕಾರದಿಂದ ಕೊಡುವುದು ಸರಿಯಲ್ಲ ಎಂದು ನನ್ನ ಭಾವನೆ. ಬೆಲೆಗಳನ್ನು ಹತೋಟಿಯಲ್ಲಿಡುವುದು ರಾಜ್ಯಸರ್ಕಾರಕ್ಕೆ ಒಂದಕ್ಕೆ

ಸಂಬಂಧಪಟ್ಟ ವಿಷಯವಲ್ಲ. ಕೇಂದ್ರ ಸರ್ಕಾರಕ್ಕೂ ಸೇರಿದೆ. ಕೇಂದ್ರದಲ್ಲಿಯೂ ನಿಮ್ಮ ಸರ್ಕಾರವೇ ಇರುವಾಗ ಈ ಬಗ್ಗೆ ಆದಷ್ಟು ನಿರ್ಧಾಕ್ಷಿಣ್ಯವಾದ ಕ್ರಮಗಳನ್ನು ತೆಗೆದುಕೊಂಡು, ಅವರ ಒತ್ತಾಯ ತಂದು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

3-00 ಪಿ.ಎಂ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರುಗಳು ಅನೇಕ ವಿಷಯಗಳನ್ನು ರೂಲ್ ೩೧೨ರ ಕೆಳಗೆ ಪ್ರಸ್ತಾಪ ಮಾಡಿದ್ದಾರೆ. ಬೆಲೆ ಏರಿಕೆಯ ಸಮಸ್ಯೆಯ ಬಗ್ಗೆ ಮಾನ್ಯ ಶ್ರೀನಿವಾಸ್ ಅವರು ಹೇಳಿದ ಹಾಗೆ, ಇದು ರಾಜ್ಯದ ಕೈಯಲ್ಲಿ ಒಂದರಲ್ಲಿಯೇ ಇಲ್ಲ, ಕೇಂದ್ರ ಸರ್ಕಾರದವರೂ ಕೂಡ ಇದರ ಬಗ್ಗೆ ಯೋಚಿಸಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಇದರ ಬಗ್ಗೆ ತಮ್ಮ ನೀತಿಗಳನ್ನು ಎಷ್ಟರಮಟ್ಟಿಗೆ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದಕ್ಕೆ ತಾವು ತಮ್ಮ ಶಕ್ತಿಯನ್ನು ಪ್ರಯೋಗ ಮಾಡಬೇಕಾಗುತ್ತದೆ. ದಯಮಾಡಿ ಈ ಸದನಕ್ಕೆ ತಾವು ಆಶ್ವಾಸನೆ ಇದರ ಬಗ್ಗೆ ಕೊಡಬೇಕು. ಸಕ್ಕರೆಯ ಬೆಲೆಯ ವಿಚಾರದಲ್ಲಿ ನೋಡಿದರೆ, ಸಕ್ಕರೆಯ ಬೆಲೆ ಚುನಾವಣೆಗಳಾಗುವುದಕ್ಕೆ ಮುಂಚೆ ಹೇಗೆ ಇತ್ತು, ಈಗ ಹೇಗಿದೆ ಎನ್ನುವುದು ನಮ್ಮೆಲ್ಲರಿಗೂ ಗೊತ್ತಿರುವ ವಿಚಾರ. ಇನ್ನು ಸ್ವಲ್ಪದಿವಸಗಳಲ್ಲಿಯೇ ೯ ರಾಜ್ಯಗಳ ಚುನಾವಣೆ ಪುನ: ಬರುವುದಿದೆ. ಈಗ ಹೀಗಿರುವಾಗ ಇನ್ನು ಮುಂದೆ ಎಲ್ಲಿಗೆ ಈ ಬೆಲೆ ಹೋಗುತ್ತದೆಯೋ ಎಂದು ನಮಗೆ ಭಯವಾಗಿದೆ. ಇವತ್ತು ಬೆಲೆಯು ಏರಿಕೆ ಬಹಳ ಮಟ್ಟಿಗೆ, ಸೀಮೆಎಣ್ಣೆಯಾಗಲಿ ಸಕ್ಕರೆಯಾಗಲೀ, ಡೀಸಲ್ ಆಗಲೀ, ಸಾಮಾನ್ಯವಾಗಿ ಕೇಂದ್ರ ಸರ್ಕಾರದ ನೀತಿಯ ಮೇಲೆ ಅವಲಂಬನವಾಗಿದೆ. ಈ ಬೆಲೆಗಳನ್ನು ಹತೋಟಿಗೆ ತರುವಂಥ ಒಂದು ಏಜೆನ್ಸಿ ಏನು ಇದೆ ಅದು ಎಲ್ಲರಿಗೂ ಸಂಬಂಧಪಟ್ಟ ವಿಷಯ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಜನತೆಗೆ ಅನುಕೂಲಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ತಾವು ನಮ್ಮ ಜನತೆಯ ಕಷ್ಟಗಳನ್ನು, ಅವರ ಅಭಿಪ್ರಾಯಗಳನ್ನು ಕೇಂದ್ರಸರ್ಕಾರದ ಮುಂದೆ ಹೇಳಬೇಕು. ಈ ರೀತಿಯ ಜನಜೀವನದ ವಿಚಾರಗಳಲ್ಲಿ ರಾಜಕೀಯದ ಮಾತುಗಳನ್ನು ಆಡುವುದು ಸರಿಯಲ್ಲ. ಹೆಚ್ಚುಕಾಲ ನಮ್ಮ ಜನ ಇದನ್ನು ಸಹಿಸುವುದಿಲ್ಲ.

ಎರಡನೆಯದಾಗಿ ಸಕ್ಕರೆಯ ಬೆಲೆ ಈಗ ಎಂಟು ರೂಪಾಯಿಗಳವರೆಗೂ ಹೋಗಿದೆ. ಇಷ್ಟು ಕೊಟ್ಟರೂ ಸಕ್ಕರೆ ಸಿಕ್ಕುತ್ತದೆಯೋ ಇನ್ನು ಮುಂದೆ ಗೊತ್ತಿಲ್ಲ. ಇತ್ತೀಚಿನ ವಿದ್ಯಮಾನಗಳನ್ನು ನೋಡಿದರೆ ಸಕ್ಕರೆಯ ಸಾರ್ವಜನಿಕ ವಿತರಣೆಯನ್ನು ಸಹಕಾರ ಸಂಘಗಳ ಮೂಲಕ ಮಾಡುತ್ತಿದ್ದಾರೆ. ಸಹಕಾರ ಸಂಘಗಳಿಗೆ ಪೂರೈಕೆ ಮಾಡಬೇಕಾದಂಥ ಸಕ್ಕರೆಯಾಗಲೀ ಇತರೆ ವಸ್ತುಗಳಾಗಲೀ, ಸರಿಯಾಗಿ ಅವರಿಗೇ ದೊರೆಯುತ್ತಿಲ್ಲ. ಆದರೆ ಖಾಸಗೀ ವ್ಯಾಪಾರಿಗಳಿಗೆ ಮಾತ್ರ ಸಿಕ್ಕಾಪಟ್ಟೆ ಒದಗಿಸುತ್ತಿದ್ದಾರೆ. ಇದನ್ನೂ ಕೂಡ ರಾಜ್ಯಸರ್ಕಾರದವರು ಗಮನದಲ್ಲಿಟ್ಟುಕೊಂಡು ಬಹಳ ಮಟ್ಟಿಗೆ ಈ ಸಾರ್ವಜನಿಕ ವಿತರಣೆಯನ್ನು ಕಾರ್ಡುಗಳ ಮೂಲಕ ಮಾಡಿ ಈ ವ್ಯವಸ್ಥೆಯನ್ನು ಸುಗಮ ಗೊಳಿಸಬೇಕು ಎನ್ನುವ ಸಲಹೆಯನ್ನು ನಾನು ಕೊಡಲು ಇಷ್ಟಪಡುತ್ತೇನೆ. ಈ ಪ್ರಶ್ನೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಜೊತೆಗೂಡಿ ಸಮಾಲೋಚನೆ ಮಾಡುವಂಥಾದ್ದಾಗಿದೆ. ಜನತೆ ನಿಮ್ಮ ಮೇಲೆ ಏನೆಂಥ ಭ್ರಮೆಯನ್ನು ಇಟ್ಟುಕೊಂಡಿದ್ದರೋ ಅದು ಲೋಕಸಭೆ ಚುನಾವಣೆಗಳು ಆಗಿ ಎರಡು ತಿಂಗಳಲ್ಲಿ ತ್ರಿಮೂರ್ತಿಗಳ ಮಂತ್ರಿಮಂಡಲ ಸ್ಥಾಪನೆಯಾದಮೇಲೆ, ಹೊರಟುಹೋಗಿ ಪ್ರತಿಭಟನೆ ಮಾಡತಕ್ಕ ಸ್ಥಿತಿಗೆ ಬಂದಿದ್ದಾರೆ. ಇದನ್ನು ತಾವು ಮುಖ್ಯವಾಗಿ ಗಮನಿಸಬೇಕು ಎಂದು ನಾನು ಹೇಳುತ್ತಿದ್ದೇನೆ. ತಮ್ಮ ಆಡಳಿತ ಇದೇ ರೀತಿಯಲ್ಲಿಯೇ ಮುಂದುವರಿದರೆ ಜನತೆ ಗಂಭೀರ ಪರಿಸ್ಥಿತಿಗೆ ಹೋಗುತ್ತಾರೆನ್ನುವ ವಿಚಾರವನ್ನು ತಾವು ಈಗಲೇ ತಿಳಿದುಕೊಳ್ಳುವುದು ಒಳ್ಳೆಯದು. ಈ ಮುನ್ನೆಚ್ಚರಿಕೆಯನ್ನು ನಾನು ಸದನದಲ್ಲಿ ತಮಗೆ ಕೊಡಬೇಕಾದ್ದು ಅಗತ್ಯ ಎಂದು ತಿಳಿದುಕೊಂಡಿದ್ದೇನೆ. ಇದೆಲ್ಲವನ್ನೂ ತಾವು ಪರಿಗಣಿಸಿ ಬೆಲೆಗಳನ್ನು ಹತೋಟಿಯಲ್ಲಿ ತರುವಂಥಾದ್ದು ಮತ್ತು ವಿತರಣೆ ವ್ಯವಸ್ಥೆಯನ್ನು ಸುಗಮ ಗೊಳಿಸುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ತೀವ್ರವಾಗಿ ತೆಗೆದುಕೊಂಡು ತನ್ಮೂಲಕ ಸದನಕ್ಕೆ ಇದರ ಬಗ್ಗೆ ಆಶ್ವಾಸನೆ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ತಾವು ಬರೀ ಆಶ್ವಾಸನೆಯನ್ನು ಕೊಟ್ಟರೆ ಸಾಲದು, ಕೊಟ್ಟಂಥ ಆಶ್ವಾಸನೆ ಕಾರ್ಯರೂಪದಲ್ಲಿ ಬರಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್ ಗುಂಡೂರಾವ್ (ಮುಖ್ಯ ಮಂತ್ರಿಗಳು).—ಅಧ್ಯಕ್ಷರೇ, ಸುಮಾರು ಒಂದೂವರೆ ಗಂಟೆಗಳ ಕಾಲದಿಂದ ಬೆಲೆಗಳ ಏರಿಕೆಯ ಮೇಲೆ ರೂಲ್ ೩೧೨ರ ಕೆಳಗೆ ಚರ್ಚೆ ನಡೆದಿದೆ. ಚರ್ಚೆ ಪ್ರಾರಂಭದಲ್ಲಿ ಬೆಲೆಗಳ ಏರಿಕೆಯ ಮೇಲಿದ್ದರೂ ಕೊನೆಯಲ್ಲಿ ಅದಕ್ಕೆ ರಾಜಕೀಯವನ್ನು ತರಲಾಗಿದೆ. ಮಾನ್ಯ ಸದಸ್ಯರುಗಳು ಎಲ್ಲರೂ ಅದರಲ್ಲಿಯೂ ಮಾನ್ಯ ಶ್ರೀನಿವಾಸ್ ಅವರು ಹೇಳಿದ ಅಂಶಗಳನ್ನು ನಾನು ಕೇಳಿದ್ದೇನೆ. ಮಾನ್ಯ ಶ್ರೀನಿವಾಸ್ ಅವರು ಬಹಳ ಚೆನ್ನಾಗಿ ಈ ಬಗ್ಗೆ ಭಾಷಣ ಮಾಡಿದ್ದಾರೆ. ಬೆಲೆಗಳು ೧೯೭೭ನೇ ಇಸವಿಯಿಂದ ೭೯ನೇ ಇಸವಿಯವರೆಗೂ ಜಾಸ್ತಿಯಾಗುತ್ತಾ ಬಂದಿದೆ ಅದಕ್ಕೆ ಸರ್ಕಾರ ಒಂದೇ ಕಾರಣವೇ? ಈ ವಿಷಯವನ್ನು ನಾವು ರಾಷ್ಟ್ರ ಮಟ್ಟದಲ್ಲಿ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ವಿಚಾರ ಮಾಡಬೇಕಾಗಿದೆ. ಬೆಲೆಗಳ ಏರಿಕೆಯಿಂದುಂಟಾಗುವ ಪರಿಣಾಮಕ್ಕೆ ತಮಗೆ ಎಷ್ಟು ಸಹಾನುಭೂತಿ ಇದೆಯೋ ಅದಕ್ಕಿಂತ ನಮಗೆ ಕಡಿಮೆ ಏನೂ ಇಲ್ಲ. ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ್ ಅವರು ಇದರ ತೀವ್ರತೆಯನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಯಾವ ಕ್ರಮವನ್ನು ಸರ್ಕಾರ ತೆಗೆದು ಕೊಂಡರೆ ಉಪಯೋಗವಾಗುತ್ತದೆಂದು ರಚನಾತ್ಮಕ ಸಲಹೆಗಳನ್ನು ಕೊಟ್ಟಿಲ್ಲವೆಂದು ನನ್ನ ಭಾವನೆ. ಕೆಲವು ಮಾನ್ಯ ಸದಸ್ಯರುಗಳು ಮಾತನಾಡುವಾಗ, ರಾಜಕೀಯವಾಗಿ, ಹೆಲಿಕ್ಯಾಪ್ಟರ್ ವಿಷಯವನ್ನೂ ಹೇಳಿದ್ದಾರೆ. ಹೆಲಿಕ್ಯಾಪ್ಟರ್ ವಿಷಯಕ್ಕೂ, ಬೆಲೆ ಏರಿಕೆಗೂ ಯಾವ ಸಂಬಂಧವೂ ಇಲ್ಲ. ಪರಿಸ್ಥಿತಿ ಏನು ಚೆನ್ನಾಗಿ ತಿಳಿದು ಅದಕ್ಕೆ ಪರಿಹಾರೋಪಾಯಗಳನ್ನು ಹೇಳುವುದನ್ನು ಬಿಟ್ಟು ಬೇರೆ ರೀತಿಯಲ್ಲಿ ಮಾತನಾಡಿದರೆ ಏನು ಪ್ರಯೋಜನ? ದಯವಿಟ್ಟು ಮಾನ್ಯ ಸದಸ್ಯರುಗಳು ಈ ವಿಷಯವನ್ನು ಪೊಲಿಟಿಕಲ್ ಪ್ಲಾಟ್‌ಫಾರಂ ಮಾಡುವುದು ಬೇಡ. ಆ ರೀತಿಯಾಗಿ ಮಾತನಾಡಿದರೆ, ಈ ವಿಷಯದ ಗಾಂಭೀರ್ಯತೆ ಹೊರಟು ಹೋಗುತ್ತದೆ. ಜನತೆ ಯಾವುದನ್ನು ಯಾವ ರೀತಿಯಾಗಿ ತೀರ್ಮಾನ ಮಾಡಬೇಕು ಎಂದು ತಿಳಿದು ಆ ರೀತಿಯಾಗಿ ತೀರ್ಮಾನ ಮಾಡಿದ್ದಾರೆ. ಈಗ ಗುಲ್ಬರ್ಗದಲ್ಲಿಯೂ ತಮ್ಮ ತೀರ್ಮಾನ ಕೊಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವುದು ಬೇಡ. ಸರ್ಕಾರ ಇಂಥ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಂ ಎಂದು ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಡಿ. ಸರ್ಕಾರದವರು ಅದನ್ನು ಪರಿಶೀಲನೆ ಮಾಡುತ್ತಾರೆ. ಇದು ನಮ್ಮೆಲ್ಲರ ಜವಾಬ್ದಾರಿ. ನಾನು ಅಧಿಕಾರ ವಹಿಸಿ ಕೊಂಡಾಗ ಈರುಳ್ಳಿಯ ಬೆಲೆ ೩–೨೦ ಇತ್ತು, ಈಗ ೧–೫೦ಗಳಿಗೆ ಇಳಿದಿದೆ. ಕೆಲವು ಸದಸ್ಯರುಗಳು ಆ ಕಡೆಯಿಂದ ಮಾತನಾಡಿ ಅಭ್ಯಾಸ ಇಲ್ಲ, ಮಾನ್ಯ ಕೊಡಗಿಯವರು ಹೊಸದಾಗಿ ಅಲ್ಲಿಗೆ ಹೋಗಿದ್ದಾರೆ.

ನಾನು ಇದುವರೆಗೂ ತಾವು ಹೇಳಿದ್ದನ್ನು ಸಮಾಧಾನವಾಗಿ ಕೇಳಿದ್ದೇನೆ. ಆದ್ದರಿಂದ ಈಗ ನಾನು ಹೇಳುವುದನ್ನೂ ತಾವು ಸ್ವಲ್ಪ ಸಾವಧಾನದಿಂದ ಕೇಳಬೇಕು. ನನಗೆ ವಿರೋಧ ಪಕ್ಷದ ಕಡೆ ಕುಳಿತುಕೊಂಡು ಹೇಳಿದ ಅಭ್ಯಾಸ ಇದೆ ಈ ಕಡೆಯೂ ಹೇಳುವ ಅಭ್ಯಾಸ ಇದೆ ಈಗ ಅದರ ಬಗ್ಗೆ ಹೆಚ್ಚು ಪ್ರಸ್ತಾಪಮಾಡುವುದು ಬೇಡ. ಈಗ ಕೆರೋಸಿನ್, ಪೆಟ್ರೋಲ್ ಡೀಜಲ್ ಇವುಗಳು ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಸಹ ಸಾಕಷ್ಟು ಸಿಕ್ಕುತ್ತಾ ಇಲ್ಲ. ಸೀಮೆ ಎಣ್ಣೆ ಬಗ್ಗೆ ವರ್ಲ್ಡ್ ಮಾರ್ಕೆಟ್‌ನವರೂ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಬಲಿಷ್ಟವಾದ ಸರ್ಕಾರ ಬಂದರೂ ಕೂಡ ಇದರ ಬಗ್ಗೆ ಏನೂ ಮಾಡುವುದಕ್ಕೆ ಬರುವುದಿಲ್ಲ. ಇಡೀ ಪ್ರಪಂಚದಲ್ಲೇ ಇದರ ಪರಿಣಾಮ ಉಂಟಾಗಿದೆ. ಬೆಲೆಗಳು ಸ್ವಲ್ಪ ಮಟ್ಟಿಗೆ ಜಾಸ್ತಿಯಾಗುತ್ತಿದೆ. ಕಾರ್ಮಿಕರ ವೇತನ ಏರಿಕೆ, ರೈಲ್ವೆ ವ್ಯಾಗನ್‌ಗಳ ಕೊರತೆ, ಇತ್ಯಾದಿ ನಾನಾ ಕಾರಣಗಳಿಂದ ಕಾಸ್ಟ್ ಆಫ್ ಪ್ರೊಡಕ್ಷನ್ ಜಾಸ್ತಿಯಾಗಿದೆ. ಇದರಿಂದಾಗಿ ಎಲ್ಲಾ ಪದಾರ್ಥಗಳ ಬೆಲೆಯೂ ಸ್ವಲ್ಪ ಮಟ್ಟಿಗ ಜಾಸ್ತಿಯಾಗಿದೆ, ಚುನಾವಣೆಯ ಕಾಲದಲ್ಲಿ ಎರಡೂ ಕಡೆಯವರೂ ಕೆಲವು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದು ಕೇವಲ ಒಂದು ತಿಂಗಳೋ ಎರಡು ತಿಂಗಳೋ ಆಗಿದೆ. ಕೇಂದ್ರ ಸರ್ಕಾರದಲ್ಲಿ ಜನತಾ ಪಕ್ಷ ಅಧಿಕಾರದಲ್ಲಿತ್ತು. ಇಲ್ಲಿ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ (ಯು) ಪಕ್ಷ ಅಧಿಕಾರದಲ್ಲಿತ್ತು. ಆಗ ನಾನು ವಿರೋಧ ಪಕ್ಷದ ನಾಯಕನಾಗಿದ್ದೆ. ಈಗ ಒಟ್ಟಿನಲ್ಲಿ ನಾವು ನೀವು ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡಿ ಜೀವನಾವಶ್ಯಕ ವಸ್ತುಗಳು ಏನಿವೆ ಅವುಗಳ ಬೆಲೆಗಳು ಜಾಸ್ತಿಯಾಗಿರುವ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಯೋಚನೆ ಮಾಡೋಣ. ಯಾರು ಕಾಳಸಂತೆಕೋರರು ಇದ್ದಾರೆ ಅವರು ಕಾಳಸಂತೆಯಲ್ಲಿ ಅಗತ್ಯ ವಸ್ತುಗಳನ್ನು ಮಾರಾಟ ಮಾಡಿದರೆ ಅಂತವರ ಫೋಟೋಗಳನ್ನು ಪತ್ರಿಕೆಯಲ್ಲಿ ಹಾಕಿಸುತ್ತೇವೆ ಎಂದು ಹೇಳಿದ್ದು ನಿಜ. ಆದರೆ ಒಂದೇ ಸಾರಿ ಕಾನೂನು ಚಲಾವಣೆ ಮಾಡುವುದಕ್ಕಾಗುವುದಿಲ್ಲ. ಆ ರೀತಿ ಮಾಡಿದರೆ ಅದು ಸರ್ವಾಧಿಕಾರ ಪ್ರವೃತ್ತಿ ಎಂದು ಹೇಳುತ್ತಾರೆ. ಆದ್ದರಿಂದ ಅವರಿಗೆ ಸ್ವಲ್ಪ ಟೈಮ್ ಕೊಡಬೇಕಾಗುತ್ತದೆ, ಈ ವ್ಯಾಪಾರಸ್ಥರ ಜೊತೆಯಲ್ಲಿ ನಮ್ಮ ಅಧಿಕಾರಿಗಳು ಮಾತನಾಡಿದ್ದಾರೆ. ಅವರ

ಕಷ್ಟಗಳೂ ಕೆಲವು ಇರುತ್ತವೆ ಎಲ್ಲಾ ವ್ಯಾಪಾರಸ್ಥರೂ ತಪ್ಪಿತಸ್ಥರು ಎಂದು ಹೇಳುವುದಕ್ಕೆ ಬರುವುದಿಲ್ಲ ಕೆಲವು ವ್ಯಾಪಾರಸ್ಥರಲ್ಲಿ ಸ್ಟಾಕು ಇರಬಹುದು, ಕೆಲವು ವ್ಯಾಪಾರಸ್ಥರಲ್ಲಿ ಸ್ಟಾಕ್ ಇಲ್ಲದೆ ಇರಬಹುದು. ಕೆಲವು ಸಾಮಾನುಗಳು ಸಿಕ್ಕದೇ ಇರಬಹುದು. ಕೆಲವು ವ್ಯಾಪಾರಸ್ಥರು ಜನರಿಗೆ ಮೋಸ ಮಾಡುತ್ತಿದ್ದಾರೆ. ಆದ್ದರಿಂದ ವರ್ತಕರ ಅಸೋಷಿಯನ್ನಿನವರನ್ನು ಕರೆದು ನಮ್ಮ ಅಧಿಕಾರಿಗಳು ಮಾತನಾಡಿದ್ದಾರೆ. ಸಕ್ಕರೆ ವಿತರಣಾ ನೀತಿಯ ಬಗ್ಗೆ ಕೇಂದ್ರ ಸರ್ಕಾರದಿಂದ ಒಂದೊಂದು ವಾರದಲ್ಲಿ ಒಂದೊಂದು ತೀರ್ಮಾನಗಳು ಬರುತ್ತವೆ. ಈ ಸಕ್ಕರೆ ಮಾರಾಟದ ನೀತಿಯ ಬಗ್ಗೆ ಕೆಲವರು ಕೋರ್ಟಿಗೆ ಹೋಗಿದ್ದಾರೆ ಅದು ಅಲ್ಲಿ ಪೆಂಡಿಂಗ್ ಇದೆ. ಅದು ಇತ್ಯರ್ಥವಾಗುವವರೆವಿಗೂ ಸಕ್ಕರೆ ನೀತಿಯ ಬಗ್ಗೆ ಕೇಂದ್ರದಲ್ಲಿ ತೀರ್ಮಾನ ಮಾಡುವುದಕ್ಕೆ ಬರುವುದಿಲ್ಲ. ಹೀಗೆ ನಾನಾ ಸಮಸ್ಯೆಗಳು, ತೊಂದರೆಗಳು ಇರುವುದರಿಂದ ಬೆಲೆಗಳು ಜಾಸ್ತಿಯಾಗಿವೆ, ಈಗ ಈರುಳ್ಳಿಯ ಬೆಲೆ ಕಡಿಮೆಯಾಗಿದೆ. ಜೋಳದ ಬೆಲೆ ಕಡಿಮೆಯಾಗಿದೆ. ಬೆಲ್ಲದ ಬೆಲೆ ಕಡಿಮೆಯಾಗಿದೆ.

ಒಬ್ಬರು ಮಾನ್ಯ ಸದಸ್ಯರು.—ಬೆಲ್ಲದ ಬೆಲೆ ಜಾಸ್ತಿಯಾಗಿದೆ.

ಶ್ರೀ ಆರ್. ಗುಂಡೂರಾವ್.—ಸಕ್ಕರೆ ಬೆಲೆ ಸ್ವಲ್ಪ ಜಾಸ್ತಿಯಾಗಿದೆ. ೫೦ ಪೈಸೆ ಜಾಸ್ತಿಯಾಗಿದೆ. ಇದು ಒಂದು ವಾರ ಜಾಸ್ತಿಯಾಗುತ್ತದೆ. ಒಂದು ವಾರ ಕಡಿಮೆಯಾಗುತ್ತದೆ. ಇದಕ್ಕೆ ಬರೀ ವ್ಯಾಪಾರಸ್ಥರದೇ ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ವ್ಯಾಪಾರಸ್ಥರು ಎಲ್ಲೆಲ್ಲಿ ತಪ್ಪು ಮಾಡಿದ್ದಾರೆ ಅಂಥವರ ಮೇಲೆ ಸರ್ಕಾರ ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳುತ್ತದೆ.

SRI A. LAXMISAGAR.—My request to the Hon.Chief Minister is that it will not serve the purpose for which the discussion took place in this House if generalisations are made. Therefore, I should like the Hon. Chief Minister to be specific on the questions that have been raised so that we may give some kind of relief to the consumers. He said that there has been a little increase in the price of sugar. But it has been a process of continuous increase. I would like him to be specific; no amount of generalisations would help us.

ಶ್ರೀ ಆರ್. ಗುಂಡೂರಾವ್.—ಇದುವರೆಗೂ ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಸಾವಧಾನವಾಗಿ ಕೇಳಿದ್ದೇನೆ. ಆದ್ದರಿಂದ ಈಗ ನಾನು ಹೇಳುವುದನ್ನು ತಾವು ಸಮಾಧಾನವಾಗಿ ಕೇಳಿ. ತಾವುಗಳು ಬೆಲೆಗಳ ಏರಿಕೆಯ ಬಗ್ಗೆ ಜನರಲೈಜ್ ಮಾಡಿ ಹೇಳಿದರೆ ಸರ್ಕಾರ ಒಪ್ಪುವುದಕ್ಕೆ ತಯಾರು ಇಲ್ಲ. ಸ್ಪೆಸಿಫಿಕ್ ಆಗಿ ಕೇಳಿದರೆ ಏನಾದರೂ ಹೇಳಬಹುದು. ಈ ಬೆಲೆ ಏರಿಕೆಯ ಬಗ್ಗೆ ಒಂದು ಸ್ಟೇಟ್‌ಮೆಂಟ್ ಇದೆ. ಇದು ಬಹಳ ದೊಡ್ಡ ಸ್ಟೇಟ್‌ಮೆಂಟ್. ಇದನ್ನು ಓದುವುದಕ್ಕೆ ಹೆಚ್ಚು ಕಾಲವನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ಅದನ್ನು ಈಗ ಇಲ್ಲಿ ಓದುವುದಕ್ಕೆ ಹೋಗದೆ ಅದರ ಕಾಪಿಯನ್ನು ಮಾನ್ಯ ಸದಸ್ಯರೆಲ್ಲರಿಗೂ ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ, ಯಾವ ಪಕ್ಷದವರು ಲಾಭ ಮಾಡುತ್ತಾರೆ, ಯಾವ ಪಕ್ಷದವರು ನಷ್ಟ ಮಾಡುತ್ತಾರೆ ಎನ್ನುವ ಪ್ರಶ್ನೆ ಇಲ್ಲಿ ಇಲ್ಲ. ಬೆಲೆ ಏರಿಕೆಯನ್ನು ತಡೆಗಟ್ಟಲು ಸರ್ಕಾರ ಮತ್ತು ಮಾನ್ಯ ಸದಸ್ಯರೆಲ್ಲರ ಜವಾಬ್ದಾರಿಯೂ ಇದೆ. ಇದರ ಬಗ್ಗೆ ಚರ್ಚೆ ಮಾಡಲು ನಾವು ಅಧಿಕಾರಿಗಳ ಸಭೆಯನ್ನು ಕರೆದಿದ್ದೆವು. ಸಕ್ಕರೆ ಕೋಟಾದ ಬಗ್ಗೆ ನಾನು ಮೊನ್ನೆ ಕೇಂದ್ರ ಸರ್ಕಾರದವರೊಡನೆ ಮಾತನಾಡಿದ್ದೇನೆ; ಹೆಚ್ಚು ಕೋಟಾವನ್ನು ಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಇದಕ್ಕೆ ರಾಜಕೀಯವನ್ನು ಬೆರಸಬೇಡಿ. ಇನ್ನೂ ಈ ಸಭೆಯಲ್ಲಿ ಅನೇಕ ಚರ್ಚೆಗಳು ಬರುತ್ತವೆ. ಆಗ ಬೇಕಾದರೆ ರಾಜಕೀಯವನ್ನು ಬೆರೆಸೋಣ. ನಮ್ಮ ಸರ್ಕಾರ ಬಂದು ಕೇವಲ ೪೫ ದಿವಸಗಳು ಮಾತ್ರ ಆಗಿದೆ. ಅದು ಏನೇ ಇರಲಿ ನಾನು ಮೊನ್ನೆ ದೆಹಲಿಗೆ ಹೋಗಿದ್ದಾಗ ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಿಗಳಲ್ಲಿ ಬೆಲೆ ಏರಿಕೆಯ ಬಗ್ಗೆ ಮಾತನಾಡಿದ್ದೇನೆ. ನಮ್ಮ ರಾಜ್ಯಕ್ಕೆ ಸೀಮೆ ಎಣ್ಣೆ ಮತ್ತು ಸಕ್ಕರೆ ಕೋಟಾವನ್ನು ಜಾಸ್ತಿ ಮಾಡಬೇಕು ಎಂದು ಹೇಳಿದ್ದೇನೆ. ಇದು ಇಂಟರ್ ನ್ಯಾಷನಲ್ ಮಾರ್ಕೆಟಿಂಗ್ ಪರಿಸ್ಥಿತಿಯನ್ನು ಅವಲಂಬಿಸಿದೆ. ಈ ಸಕ್ಕರೆ ಮತ್ತು ಸೀಮೆ ಎಣ್ಣೆ ಇತ್ಯಾದಿ ಕೋಟಾವನ್ನು ಜಾಸ್ತಿ ಮಾಡುತ್ತೇವೆ ಎಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ಹಿಂದಿನ ಸರ್ಕಾರದವರು ಬೆಲೆಯನ್ನು ಜಾಸ್ತಿ ಮಾಡಿದರು ಎಂದು ನಾನು ಹೇಳುವುದಿಲ್ಲ. ನಾನಾ ಕಾರಣಗಳಿಂದ ಬೆಲೆಗಳು ಜಾಸ್ತಿಯಾಗಿವೆ.

ಆವುಗಳನ್ನು ಕಡಿಮೆ ಮಾಡಬೇಕು ಎಂದು ತಾವೆಲ್ಲರೂ ಸಲಹೆಗಳನ್ನು ಕೊಟ್ಟಿದ್ದೀರಿ, ಮಾನ್ಯ ಸದಸ್ಯರಾಗಿ .ಎಚ್. ಶ್ರೀನಿವಾಸ್ ಅವರು ನಿರ್ದಾಕ್ಷಿಣ್ಯವಾಗಿ ಕಾನೂನು ಜಾರಿ ಮಾಡಿ ಕಾಳಸಂತೆಕೋರರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆ ಬಗ್ಗೆ ಸಂಬಂಧಪಟ್ಟ ಕಾಳಸಂತೆಕೋರರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆ. ಯಾರು ವರ್ತಕರು ಜೀವನಾವಶ್ಯಕ ವಸ್ತುಗಳಬಗ್ಗೆ ಬೆಲೆಗಳ ಬಗ್ಗೆ ಜನತೆಗೆ ಮೋಸ ಮಾಡುತ್ತಾರೆ ಅಂಥವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದುಮುಂದು ನೋಡುವುದಿಲ್ಲ, ಅವರಿಗೆ ಸ್ವಲ್ಪ ಸಮಯ ಕೊಟ್ಟು ಆ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಸರ್ಕಾರ ಬಂದ ಕೂಡಲೇ ಈ ರೀತಿ ಮಾಡಿದರು, ಇದು ರಾಜಕೀಯ ಎಂದು ಹೇಳುತ್ತಾರೆ. ಇದು ಸರ್ವಾಧಿಕಾರ ನೀತಿ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದ ಸ್ವಲ್ಪ ಸಮಯಕೊಟ್ಟು ಆ ಮೇಲೆ ಕಾಳಸಂತೆಕೋರರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಳ್ಳೂರು ಆನಂದರಾವ್.—ಆಹಾರ, ಸಕ್ಕರೆ ಸೀಮೆ ಎಣ್ಣೆ ಇತ್ಯಾದಿಗಳ ವಿತರಣೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕು.

ಶ್ರೀ ಆರ್. ಗುಂಡೂರಾವ್.- ವಿತರಣಾ ವ್ಯವಸ್ಥೆಯನ್ನು ಹಿಂದಿನ ಸರ್ಕಾರ ಮಾಡಿದ್ದು. ಅದನ್ನು ನಾವು ಇಷ್ಟೊಂದು ತೀವ್ರವಾಗಿ ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಸ್ವಲ್ಪ ಸಮಯ ಬೇಕು. ಈಗ ಸೊಸೈಟಿಗಳ ಮುಖಾಂತರ ಫೇರ್‌ಪ್ರೈಜ್ ಡಿಪೋಗಳ ಮುಖಾಂತರ ಅಗತ್ಯ ವಸ್ತುಗಳನ್ನು ವಿತರಣೆ ಮಾಡುತ್ತಿದ್ದಾರೆ. ಈ ಬೆಲೆಗಳ ಏರಿಕೆಯನ್ನು ತಡೆಗಟ್ಟುವುದು ನಮ್ಮ ಮತ್ತು ಮಾನ್ಯ ಸದಸ್ಯರೆಲ್ಲರ ಜವಾಬ್ದಾರಿಯೂ ಇದೆ. ವಿತರಣಾ ವ್ಯವಸ್ಥೆಯನ್ನು ಹಿಂದಿನ ಸರ್ಕಾರ ಮಾಡಿದ್ದು, ಅದನ್ನು ಎರಡು ಮೂರು ತಿಂಗಳಲ್ಲೇ ಸರಿಪಡಿಸುವುದು ಕಷ್ಟವಾಗುತ್ತದೆ. ಜೊತೆಗೆ ಜನಸಂಖ್ಯೆ ಬೇರೆ ೩ ಕೋಟಿ ಇದ್ದದ್ದು ೩½ ಕೋಟಿಗೆ ಏರುತ್ತಿದೆ. ಈ ವಿತರಣಾ ವ್ಯವಸ್ಥೆಯನ್ನು ಯಾವ ರೀತಿ ಸರಿಪಡಿಸಬೇಕು, ಯಾವ ರೀತಿ ಬೆಲೆಗಳ ಏರಿಕೆಯನ್ನು ತಡೆಗಟ್ಟಬೇಕು ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡಿ ಉತ್ತಮ ಪಡಿಸುವುದಕ್ಕೆ ಸರ್ಕಾರಕ್ಕೆ ತೀವ್ರತೆ ಇದೆ. ಇದಕ್ಕೆ ಸಂಬಂಧಪಟ್ಟಂತೆ ೯ ಪೇಜ್‌ಗಳ ಒಂದು ಸ್ಟೇಟ್ ಮೆಂಟ್ ಇದೆ. ಅದನ್ನು ತಮಗೆಲ್ಲಾ ಸರ್ಕ್ಯುಲೇಟ್ ಮಾಡಿಸುತ್ತೇನೆ.

SRI A. LAKSHMI SAGAR.—It may be circulated Copies may kindly be made available to us.

ಶ್ರೀ ಆರ್. ಗುಂಡೂರಾವ್.—ಮತ್ತೆ ಈ ವಿಚಾರದಲ್ಲಿ ನಾವು ತೀವ್ರವಾದ ಕ್ರಮ ತೆಗೆದುಕೊಂಡು ಎಲ್ಲ ಬಡ ಜನತೆಗೂ ಸರಿಯಾದ ರೀತಿಯಲ್ಲಿ ಆಹಾರ ಪದಾರ್ಥಗಳು ಸಿಗುವಂಥ ವ್ಯವಸ್ಥೆ ಮಾಡುತ್ತೇವೆಂದು ಹೇಳುತ್ತೇನೆ.

LEGISLATIVE BUSINESS

BILLS FOR INTRODUCTION

KARNATAKA COMMAND AREA DEVELOPMENT BILL, 1980.

LEAVE TO INTRODUCE

SRI R. GUNDU RAO (Chief Minister).—I beg to move:

"That leave be granted to introduce the Karnataka Command Area Development Bill, 1980"

MR. SPEAKER.—The question is:

"That leave be granted to introduce the Karnataka Command Area Development Bill, 1980"

The Motion was adopted and leave was granted